ನಮ್ಮನ್ನು ಪದೆಪದೇ ನೀರು ಕೊಡಿ ಎಂದು ಕೇಳುತ್ತಾರೆ. ಈ ಎಲ್ಲಾ ವ್ಯವಸ್ಥೆಯನ್ನು ಕೂಡ ಸರ್ವನಾಶ ಮಾಡಬೇಕೆನ್ನುವಷ್ಟು ಸಿಟ್ಟು ನನಗೆ ಬರುತ್ತದೆ. ಕುಡಿಯುವ ನೀರಿನ ಬಗ್ಗೆ ನಾಲ್ಕು ಸಾರಿ ಇಲ್ಲಿ ಚರ್ಚೆ ಆಗಿದೆ. ರೇಟ್ ಬಗ್ಗೆ ಇನ್ನು ಒಂದೆರಡು ದಿವಸಗಳಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳಿದರೆ ಹೇಗೆ? ಮೊದಲನೆ ಸಾರಿ ಈ ವಿಷಯ ಅವರನ್ನು ಕಾಡಿಸಿತು. ಎರಡನೆಯ ಸಾರಿ ಅವರನ್ನು ಈ ವಿಷಯ ಕಾಡಿಸಿತು. ಮೂರನೇ ಸಾರಿ ಕಾಡಿಸಿತು. ನಾಲ್ಕನೇ ಸಾರಿ ಈ ವಿಷಯ ಅವರನ್ನು ಕಾಡಿಸಿದರೂ ಸಹ ಅವರು ಇವತ್ತು ಇನ್ನು ಒಂದೆರಡು ದಿವಸಗಳಲ್ಲಿ ನಿರ್ಧಾರ ತೆಗೆದುಕೊಳ್ಳುತ್ತೇವೆಂದು ಹೇಳುವುದರ ಅರ್ಥ ಏನು? ತಮ್ಮ ಗಮನಕ್ಕೂ ಕೂಡ ನಾನು ತಂದಿದ್ದೇನೆ. ಜಿಲ್ಲಾಧಿಕಾರಿಗಳಿಗೆ ಕೊಡತಕ್ಕಂಥ ಹಣ ಬೇರೆ. ಜಿಲ್ಲಾ ಪರಿಷತ್ತುಗಳಿಗೆ ಕೊಡತಕ್ಕಂಥ ಹಣ ಬೇರೆ ಎಂದು ಅವರು ಹೇಳಿದರು ನಿಜ ನಾನು ಒಪ್ಪಿಕೊಳ್ಳುತ್ತೇನೆ. ಹಣ ಯಾರದೇ ಆಗಿರಲಿ ಜನಗಳಿಗೆ ಕುಡಿಯುವ ನೀರು ಬಹಳ ಮುಖ್ಯ. ಇದು ಜಿಲ್ಲಾ ಪರಿಷತ್ತು ಬೋರ್‌ವೆಲ್ ಇದರಲ್ಲಿ ಒಂದು ತರಹ ನೀರು ಸರ್ಕಾರದಿಂದ ಬರಗಾಲ ಕಾಮಗಾರಿಯಲ್ಲಿ ಮಾಡಿಸುತ್ತಿರುವಂತಹ ಬೋರ್‌ವೆಲ್ ಇದರಲ್ಲಿ ಬೇರೆ ಒಂದು ತರಹದ ಬಣ್ಣದ ನೀರು ಬರುತ್ತದೆಂದು ಏನಾದರೂ ಇದೆಯೇ ಮಾನ್ಯ ಅಧ್ಯಕ್ಷರೇ? ಇರತಕ್ಕಂಥಾದ್ದು ಎಲ್ಲಾ ಒಂದೇ ನೀರು ಒಟ್ಟಿನಲ್ಲಿ ಜನಗಳಿಗೆ ನೀರು ಬೇಕು. ನಾವು ಈಗಾಗಲೇ ಸರ್ಕಾರದಲ್ಲಿ ಮನವಿ ಮಾಡಿದ್ದೇವೆ. ಇರತಕ್ಕಂಥ ಪರಿಸ್ಥಿತಿಯ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೇವೆ. ಅಲ್ಲಿ ಈಗಾಗಲೇ ಕೆಲಸ ನಡೆಯುತ್ತಿದೆ. ಕೊಳವೆ ಬಾವಿಗಳು ಆಗುತ್ತಿವೆ. ಜಿಲ್ಲಾ ಪರಿಷತ್ತಿನಿಂದ ಇವತ್ತು ಸಂಪೂರ್ಣವಾಗಿ ಕೆಲಸ ನಿಂತು ಹೋಗಿದೆ. ಅಲ್ಲಿ ಏನೂ ಕೆಲಸ ಆಗುತ್ತಿಲ್ಲ. ಅದ್ದರಿಂದ ಸರ್ಕಾರ ನಾಳೆ ನಾಡಿದ್ದು ತೀರ್ಮಾನ ತೆಗೆದುಕೊಂಡರೆ ಹೇಗೆ? ಈ ಸದನದಲ್ಲಿ ತಾವು ಹೇಳಬೇಕು. ಅಧಿಕಾರಿಗಳು ಕೊಟ್ಟಿರತಕ್ಕಂಥ ವರದಿ ಸರ್ಕಾರದ ಬಳಿ ಇದೆ. ನಮ್ಮ ಕಷ್ಟವನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತಂದಿದ್ದೇವೆ. ದಯಮಾಡಿ ಈಗಲೇ ಒಪ್ಪಿಗೆ ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುವ ಬಗ್ಗೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ ಇಡೀ ರಾಜ್ಯದಲ್ಲಿ ತೀವ್ರವಾಗಿರತಕ್ಕಂಥ ಕುಡಿಯುವ ನೀರಿನ ಅಭಾವ ಇದೆ. ಇದು ತಮಗೂ ಸರ್ಕಾರಕ್ಕೂ ಗೊತ್ತಿರತಕ್ಕಂಥ ವಿಚಾರ. ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದಾರೆ. ಈ ಬಗ್ಗೆ ಭರವಸೆಗಳನ್ನು ಆಶ್ವಾಸನೆಗಳನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕೊಟ್ಟಿದ್ದರೆ ತಾವು ಕೊಟ್ಟಿದ್ದೀರಿ. ಆದರೆ ವಸ್ತು ಸ್ಥಿತಿ ಏನು ಇದೆ? ಇದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ತಮ್ಮ ಗಮನಕ್ಕೂ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ವಸ್ತು ಸ್ಥಿತಿ ಏನೆಂದರೆ ಆ ಅಧಿಕಾರಿಗಳ ಹೆಸರನ್ನು ನಾನು ಹೇಳುವುದಕ್ಕೆ ಬಯಸುವುದಿಲ್ಲ. ಜಿಲ್ಲಾ ಪರಿಷತ್ತು ಮುಖ್ಯ ಕಾರ್ಯದರ್ಶಿಗಳು ಹೇಳುತ್ತಾರೆ, ಜಿಲ್ಲಾಧಿಕಾರಿಗಳು ಹೇಳುತ್ತಾರೆ ನಮಗೆ ರಿಗ್ ಯಂತ್ರಗಳ ಸಮಸ್ಯೆ ಇಲ್ಲ. ಡಬ್ಬಲ್ ವಿಜಿನ್ನಿಯಿಂದ ಕೆಲಸ ಮಾಡುವುದಕ್ಕೆ ನಮಗೆ ಕನ್‌ಫ್ಯೂಷನ್ ಇಲ್ಲ. ಜಿಲ್ಲಾ ಪರಿಷತ್ತು ಅಧ್ಯಕ್ಷರುಗಳಿಗೆ ಮತ್ತು ಸರ್ಕಾರದ ಮಂತ್ರಿಗಳಲ್ಲಿ ಏನಾದರೂ ಭಿನ್ನಾಬಿಪ್ರಾಯ ಇರಬಹುದು. ಬರಪರಿಹಾರ ಕಾಮಗಾರಿಗಳಲ್ಲಿ ಕೆಲಸವನ್ನು ಮಾಡಲಿಕ್ಕೆ ಮುಖ್ಯ ಕಾರ್ಯದರ್ಶಿಗಳು ಮತ್ತು ಜಿಲ್ಲಾಧಿಕಾರಿಗಳು ಕೆಲಸ ಮಾಡಲಿಕ್ಕೆ ಒಟ್ಟಿಗೆ ತಯಾರಾಗಿದ್ದಾರೆ. ಅವರ ತೊಂದರೆ ಏನೂ ಇಲ್ಲ. ಒಬ್ಬರೆ ಮಾಡತಕ್ಕಂಥಾದ್ದು ಜಿಲ್ಲಾ ಪರಿಷತ್ತಿನ ಇಂಜಿನಿಯರ್ ಆದರೆ ಅವರು ಒಟ್ಟಿಗೆ ಮಾಡಲಿಕ್ಕೆ ಇರುವ ತೊಂದರೆ ಅಧಿಕಾರಿಗಳು ಹೇಳುತ್ತಾರೆ ಹಣದ ಕೊರತೆ. ಕಳೆದ ಒಂದು ವಾರದಿಂದ ಏನು ಮಾಡುತ್ತಿದ್ದಾರೆಂದರೆ ಎಲ್ಲಾ ಶಾಸಕರ

ಬಳಿ ತಹಶೀಲ್ದಾರರು ಬಂದು 10 ಬೋರ್‌ವೆಲ್‌ಗಳಿಗೆ ಹೆಸರು ತೆಗೆದುಕೊಂಡು ಹೋಗುತ್ತಿದ್ದಾರೆ. ಒಂದೊಂದು ಕ್ಷೇತ್ರದಲ್ಲಿ ಕೊನೇ ಪಕ್ಷ 50-60-100-120 ಬೋರ್‌ವೆಲ್‌ಗಳ ಅವಶ್ಯಕತೆ ಇದೆ. ನಾನು ಸರ್ಕಾರವನ್ನು ಕೇಳುತ್ತೇನೆ. ನೀವು ಎಷ್ಟು ತಾಲ್ಲೂಕುಗಳಿಗೆ ಎಷ್ಟು ಕೋಟಿ ಬಿಡುಗಡೆ ಮಾಡುತ್ತೀರಿ? ನಾನು ಡೀಟೇಲ್ಸ್ ಕೊಡಿ ಎಂದು ಕೇಳುತ್ತಿಲ್ಲ, ಒಂದು ಕಡೆ ನಮಗೆ ಹಣದ ಕೊರತೆ ಇಲ್ಲವೆಂದು ಹೇಳುತ್ತೀರಿ. ಆದರೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಮತ್ತು ಜಿಲ್ಲಾಧಿಕಾರಿಗಳು ಸರ್ಕಾರದ ಅಂಗ ಅಲ್ಲವೇ? ಅವರು ಸರ್ಕಾರದ ಒಂದು ಭಾಗ ಅಲ್ಲವೇ ಅವರು ಇದನ್ನು ಹೇಳುತ್ತಾರೆ. ನಾವು ಕೇಳಿದಾಗ ಸ್ವಾಮಿ ನಮಗೆ ಹಣ ಬಿಡುಗಡೆ ಆಗಿಲ್ಲವೆಂದು ಹೇಳುತ್ತಾರೆ. ನಿರ್ದಿಷ್ಟವಾಗಿ ಕೇಳತಕ್ಕಂಥಾದ್ದೂ ಇಷ್ಟೇ. ತಾವು ತಾಲ್ಲೂಕು ಸಮಿತಿ ಮಾಡಿರತಕ್ಕಂಥಾದ್ದು ಅದಕ್ಕೆ ಶಾಸಕರೆ ಅಧ್ಯಕ್ಷರಾಗಿರತಕ್ಕಂಥಾದ್ದು ಅವೆಲ್ಲಾ ನಮಗೆ ಮುಖ್ಯ ಅಲ್ಲ, ಅವರು ಮುಖ್ಯ ಎಂದು ನಾನು ತಿಳಿದುಕೊಂಡಿಲ್ಲ, ನಾನು ನಿರ್ದಿಷ್ಟವಾಗಿ ಮಾನ್ಯ ಮಂತ್ರಿಗಳಲ್ಲಿ ಸರ್ಕಾರದಲ್ಲಿ ಕೇಳುವುದು, ಎಷ್ಟು ಹಣ ಇವತ್ತು ಬಿಡುಗಡೆ ಮಾಡುತ್ತೀರಿ? ಅದಕ್ಕೆ ನಿರ್ದಿಷ್ಟವಾಗಿ ಉತ್ತರ ಬೇಕು. ಎಷ್ಟು ಕೋಟಿ ರೂಪಾಯಿಗಳನ್ನು ಈ ತಿಂಗಳ 31ರ ಒಳಗೆ ಬಿಡುಗಡೆ ಮಾಡುತ್ತೀರಿ ಮತ್ತು ಏಪ್ರಿಲ್ ತಿಂಗಳಲ್ಲಿ ಎಷ್ಟು ಹಣ ಬಿಡುಗಡೆ ಮಾಡುತ್ತೀರಿ ಎನ್ನುವುದನ್ನು ದಯವಿಟ್ಟು ತಾವು ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಸಭಾಧ್ಯಕ್ಷರೆ, ಇದರ ಬಗ್ಗೆ ತಾವೂ ಸಹ ಸನ್ಮಾನ್ಯ ಸಚಿವರ ಗಮನ ಸಳೆಯುವ ಪ್ರಯತ್ನ ಮಾಡಿದ್ದಿರಿ. ನಾವೂ ಒತ್ತಾಯ ಮಾಡುತ್ತಿರುವುದು ಬೋರ್‌ವೆಲ್‌ಗಳನ್ನು ತೆಗೆಯುವುದಕ್ಕೆ ಕಂಟ್ರಾಕ್ಟರ್ಸ್ ಮುಂದೆ ಬರುತ್ತಿಲ್ಲ, ಕಾರಣ, ರೇಟ್ ಅವರಿಗೆ ಗಿಟ್ಟುತ್ತಿಲ್ಲವೆಂದು, ನಾವು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ನೀವು ಯಾವುದೇ ರೀತಿ ತೆಗಿಸಿ. ಅದು ನಿಮಗೆ ಬಿಟ್ಟಿದ್ದುದು. ವಾಸ್ತವಿಕವಾಗಿ ಬೋರ್‌ವೆಲ್ ತೆಗೆಯುತ್ತಿಲ್ಲ, ಒಂದೇ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಹೆಚ್ಚು ರೇಟ್ ಕೊಡುವುದು. ಅದೇ ಜಿಲ್ಲಾಪರಿಷತ್ತಿನಲ್ಲಿ ಕಡಿಮೆ ರೇಟ್ ಕೊಟ್ಟರೆ ಯಾರು ಬರುತ್ತಾರೆ. ಬೋರ್‌ವೆಲ್ ತೆಗೆಯುವುದಕ್ಕೆ ಇದರಲ್ಲಿ ಒಂದು ಇದೆ, ಇವೆರೆಲ್ಲಾ ಒಂದು ಅಸೋಸಿಯೇಷನ್ ಮಾಡಿಕೊಂಡು, ಜಿಲ್ಲಾಧಿಕಾರಿಗಳ ಮೂಲಕ ಜಾಸ್ತಿ ರೇಟ್ ಮಾಡಿಕೊಂಡು ಜಿಲ್ಲಾಪರಿಷತ್ತಿನಲ್ಲೂ ಅದೇ ರೇಟ್ ಕೊಡಬೇಕೆಂದು ಕೇಳುತ್ತಿದ್ದಾರೆ. ಒಂದು ಸಾರಿ ಒಂದು ರೇಟ್‌ಗೆ ಡಿ.ಸಿ.ಯವರು ಒಪ್ಪಿಕೊಂಡರೆ ಅದೇ ರೇಟನ್ನು ಜಿಲ್ಲಾಪರಿಷತ್ತಿಗೂ ಕೊಡುವುದು ನಿಮ್ಮ ಕರ್ತವ್ಯ ಇದೆ. ನಾವು ಕಡಿಮೆ ರೇಟ್ ಕೊಟ್ಟೇ ಅಗತ್ಯ ಇರುವ ಕಡೆ ಬೋರ್‌ವೆಲ್‌ಗಳನ್ನು ಹಾಕಿಸಿಕೊಡುತ್ತೇವೆ ಎನ್ನುವ ಭರವಸೆಯನ್ನಾದರೂ ಕೊಡಿ. ನೀವು ತೀರ್ಮಾನ ತೆಗೆದುಕೊಳ್ಳುವುದರೊಳಗೆ ಮಳೆಗಾಲ ಬರುತ್ತದೆ. ನವೆಂಬರ್‌ನಿಂದ ಮಾರ್ಚ್ ಎಂಡ್‌ವರಿಗೂ ಜನರು ಬರಗಾಲದಲ್ಲಿ ಕಷ್ಟಪಡುತ್ತಿದ್ದಾರೆ, ಕುಡಿಯುವುದಕ್ಕೆ ನೀರಿಲ್ಲ. ಇವರು ವಾಸ್ತವಿಕ ಸ್ಥಿತಿಗಳನ್ನು ನೋಡುವುದಕ್ಕೆ ಹೋಗಿಲ್ಲ. ಸನ್ಮಾನ್ಯ ವಿರೋಧ ಪಕ್ಷದ ಉಪನಾಯಕರಾದ ಸಿಂಧ್ಯಾರವರು ಹೇಳಿದ ಹಾಗೆ ಅದಕ್ಕೆ ಎಷ್ಟು ಬೇಕೋ ಅಷ್ಟು ಹಣವನ್ನು ಬಿಡುಗಡೆ ಮಾಡಿಲ್ಲ. ನಾವು ಏಪ್ರಿಲ್ ತಿಂಗಳಿನಲ್ಲಿ ಹಳ್ಳಿಗಳಿಗೆ ಹೋಗುವುದು ಹೇಗೆ? ಜನರುಗಳನ್ನು ಎದುರಿಸುವುದು ಹೇಗೆ? ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಯಾವ ರೇಟ್‌ನ್ನು ಕೊಡುತ್ತಿದ್ದೀರೋ ಅದೇ ರೇಟ್‌ನ್ನು ಜಿಲ್ಲಾಪರಿಷತ್ತಿನಲ್ಲೂ ಕೊಡುವಂಥ ವ್ಯವಸ್ಥೆ ಮಾಡಿ. ಇಲ್ಲವೆಂದರೆ, ಬೋರ್‌ವೆಲ್‌ಗಳನ್ನು ತೆಗೆಯುವುದಕ್ಕಾಗದೆ ಕುಡಿಯುವ ನೀರಿಗೆ ಜನರು ಬಹಳ ಕಷ್ಟ ಪಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ರಾಜ್ಯದ ಕುಡಿಯುವ ನೀರಿನ ವ್ಯವಸ್ಥೆಗೆ 50 ಕೋಟಿ ರೂಪಾಯಿಗಳನ್ನಾದರೂ ಕೊಡಬೇಕೆಂದು ನಾವು ಈ

ಹಿಂದೆ ಕೇಳಿದ್ದೆವು. ಅವತ್ತು 50 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಮಾನ್ಯ ಕಂದಾಯ ಸಚಿವರು ಹೇಳಿದರು. ಅದರ ಪರಿಸ್ಥಿತಿ ಏನಾಯಿತು? ಅದರ ಚಿತ್ರ ಏನಾಯಿತೆಂದು ನಮಗೆ ಇನ್ನೂ ಅರ್ಥವಾಗುತ್ತಿಲ್ಲ. ಕೊಳವೆ ಬಾವಿಗಳನ್ನು ತೆಗೆಸುವುದಕ್ಕೆ ತಾಲ್ಲೂಕು ಸಮಿತಿಗೆ ಅಧಿಕಾರ ಕೊಡುತ್ತೇವೆಂದು ತಾವು ಹೇಳಿದ್ದೀರಿ, ಯಾವ ರೀತಿ ಅಧಿಕಾರ ತೆಗೆದುಕೊಳ್ಳುವುದು? ಇವರಿಗೆ ಹಣಕಾಸಿನ ವ್ಯವಸ್ಥೆ ಇರುವುದಿಲ್ಲ. ಇವರು ಜಿಲ್ಲಾಪರಿಷತ್ತಿನವರನ್ನು ಕೇಳಬೇಕೇ? ಅಥವಾ ಜಿಲ್ಲಾಧಿಕಾರಿಯವರನ್ನು ಕೇಳಬೇಕೇ? ಇದಕ್ಕೆ ಏನೂ ವ್ಯವಸ್ಥೆ ಇಲ್ಲ. ಈ ಸಭೆ ಸೇರಿದಾಗ ಅಂದರೆ ಒಂದು ತಿಂಗಳಿನಿಂದ ಈ ಕುಡಿಯುವ ನೀರಿನ ಬಗ್ಗೆ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಈ ಕೊನೆಯ ದಿವಸವೂ ಸಹಾ ಕುಡಿಯುವ ನೀರಿನ ಬಗ್ಗೆ ಮಾತನಾಡುತ್ತಿದ್ದೇವೆ. ಇದು ಕಣ್ಣೀರಿನ ಚಿಂತೆ ಆಗುತ್ತಿದೆಯೋ ಹೊರತು ಇದಕ್ಕೆ ವ್ಯವಸ್ಥಿತವಾಗಿ ಕೆಲಸ ಆಗಿಲ್ಲ. ಮುಂದೆ ಚುನಾವಣೆಗೆ ಹೋಗುತ್ತಿದ್ದಾರೆ. ಎಲ್ಲಾ ಪಕ್ಷದವರು ಚುನಾವಣೆಗೆ ಹೋಗಬೇಕಾಗಿದೆ. ನೀವ ಯಾವ ಬೀದಿಗೂ ಹೋಗುವುದಕ್ಕಾಗುವುದಿಲ್ಲ. ಬಿಂದಿಗೆ ತೆಗೆದುಕೊಂಡು ಹೊಡೆಯುವುದಕ್ಕೆ ಜನ ಬರುತ್ತಾರೆ. ಆದ್ದರಿಂದ ಕೆಟ್ಟಿರತಕ್ಕ ಕೊಳವೆ ಬಾವಿಗಳನ್ನು ಮೊದಲು ರಿಪೇರಿ ಮಾಡಿಸಿ. ನಾನು ನಮ್ಮ ತಾಲ್ಲೂಕಿನಲ್ಲಿ ಕೆಟ್ಟಿರುವ ಕೊಳವೆ ಬಾವಿಗಳ ಒಂದು ಪಟ್ಟಿಯನ್ನು ಕೊಟ್ಟಿದ್ದೇನೆ. ಈವರೆವಿಗೂ ಅವುಗಳ ರಿಪೇರಿ ಮಾಡಿಲ್ಲ. ನನ್ನ ಒಂದೇ ತಾಲ್ಲೂಕಿನಲ್ಲಿ 800 ಕೊಳವೆ ಬಾವಿಗಳು ಕೆಟ್ಟಿರಬೇಕೆಂದರೆ ಇಡೀ ರಾಜ್ಯದಲ್ಲಿ ಎಷ್ಟು ಕೊಳವೆ ಬಾವಿಗಳು ಕೆಟ್ಟಿರಬಹುದು? ತಾವು ಊಹಿಸಬಹುದು. ಇವರಿಂದ ಮಾತಿನ ಉಪಕಾರ ಮತ್ತು ಉಪದೇಶ ಆಗುತ್ತಿದೆಯೊ ಹೊರತು ಕೆಲಸ ಇದುವರೆಗೂ ಏನೂ ಆಗಿಲ್ಲ, ಆದ್ದರಿಂದ, ಕಂದಾಯ ಸಚಿವರು ಮತ್ತು ಗ್ರಾಮೀಣ ಅಭಿವೃದ್ಧಿ ಸಚಿವರು ಸೇರಿ ಒಂದು ಹೊಸ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡು ಸಮರೋಪಾದಿಯಲ್ಲಿ ಮಾಡಿದರೆ ಒಂದು ಅನುಕೂಲವಾಗುತ್ತದೆಂದು ಹೇಳುತ್ತಿದ್ದೇನೆ. ತಾಲ್ಲೂಕು ಸಮಿತಿಯವರಿಗೆ ಎಷ್ಟು ದುಡ್ಡು ಬಿಡುಗಡೆ ಮಾಡುತ್ತೇವೆಂದು ಹೇಳಬೇಕು. ದುಡ್ಡು ಇಲ್ಲದೆ ಈ ಸಮಿತಿ ಏನು ಮಾಡಬೇಕು? ಈ ತಾಲ್ಲೂಕಿನಲ್ಲಿ ಇಷ್ಟು ಕೊಳವೆ ಬಾವಿಗಳನ್ನು ತೆಗೆಸಬೇಕೆಂದು ತೀರ್ಮಾನ ತೆಗೆದುಕೊಂಡರೆ ಅದಕ್ಕೆ ಹಣ ಬೇಡವೆ? ಇದರ ಬಗ್ಗೆ ತಿಳಿಸಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಸದಸ್ಯರುಗಳು ಹೇಳಿದ್ದನ್ನು ನಾನು ಕೇಳಿದ್ದೇನೆ. ಈಗ ರೇಟಿನ ಬಗ್ಗೆ ಹೇಳುವುದಾದರೆ, ಪ್ರೈವೇಟ್ ರಿಗ್‌ನವರು ಕಡಿಮೆ ರೇಟ್‌ಗೆ ಮಾಡುತ್ತಾರೆ, ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್‌ನವರು ಜಾಸ್ತಿ ರೇಟ್‌ಗೆ ಮಾಡುತ್ತಾರೆಂದು ಇದೆ. ಈಗ ಪ್ರೈವೇಟ್‌ನವರೂ ಕೂಡಾ ಜಾಸ್ತಿ ರೇಟೇ ಕೇಳುತ್ತಿದ್ದಾರೆ. ಅದು ಸಹಜವಾಗಿರತಕ್ಕಂಥ ಪರಿಸ್ಥಿತಿಯೂ ಆಗಿದೆ. ಈ ರೇಟಿನ ವ್ಯತ್ಯಾಸದ ಬಗ್ಗೆ ಮಾತನಾಡಿ ಒಂದು ತೀರ್ಮಾನ ತೆಗೆದುಕೊಳ್ಳುತ್ತೇನೆಂದು ನಾನು ಆಗಲೇ ಹೇಳಿದ್ದೇನೆ. ಎರಡನೇಯ ವಿಚಾರ ಪಂಚಾಯತಿ ಹಂಗಾಮಿ ಸಮಿತಿಗಳನ್ನು ಏನು ಮಾಡಿದ್ದೇವೆ ಅವುಗಳ ತೀರ್ಮಾನ ತೆಗೆದುಕಂಡು ಕೆಲಸ ಮಾಡಲಿಕ್ಕೆ ಅವರು ಪ್ರಯತ್ನ ಮಾಡಬೇಕು. ಅದಕ್ಕೆ ಯಾವ ಆತಂಕ ಇರುವುದಿಲ್ಲವೆಂದು ಹೇಳುತ್ತೇನೆ. ಅದಕ್ಕೆ ಹಣ ಕೊಡತಕ್ಕದ್ದು, ಮಾಡತಕ್ಕದ್ದು, ಇದರ ಬಗ್ಗೆ ಯಾವುದೇ ಆತಂಕ ಇಲ್ಲ ಎಂದು ಹೇಳಿದ್ದೇನೆ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಎಷ್ಟು ಹಣ ಕೊಟ್ಟಿದ್ದೀರಿ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಎಷ್ಟು ಹಣ ಕೊಡುತ್ತೀರಿ ಎಂದು ಕೇಳುತ್ತಿದ್ದೇವೆ.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಸದಸ್ಯರುಗಳ ಮನಸ್ಸಿನಲ್ಲಿ ಅಭಾವ ಪರಿಸ್ಥಿತಿಯ ಬಗ್ಗೆ ಏನು ಆತಂಕ ಇದೆ. ನಮಗೂ ನಿಮಗಿಂತ ಸಾವಿರ ಪಟ್ಟು ಆಂತಕ ಇದೆ. ನಿಮಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಅವಕಾಶ ಕೊಟ್ಟರೆ ಸಂತೋಷವಾಗುತ್ತದೆ. ನಿಮ್ಮ ಮನಸ್ಸಿನಲ್ಲಿ ಏನು ಕಳವಳ ಇದೆ, ಅದಕ್ಕಿಂತ ಜಾಸ್ತಿ ಕಳವಳ ನಮಗೂ ಇದೆ. ಆದ್ದರಿಂದ ನೀವು ಚಿಂತೆ ಮಾಡಬೇಕಾಗಿಲ್ಲ, ನಾನು ಎಷ್ಟು ಹಣ ಕೊಡುತ್ತೇವೆ ಎಂದು ಹೇಳುವುದಿಲ್ಲ, ಕಾರಣ ಏನು ಎಂದರೆ ಏಪ್ರಿಲ್ ಫಸ್ಟ್‌ಗೆ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ನಾಳೆ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ದುಡ್ಡು ಯಾರಿಗೆ ಕೇಳಬೇಕು?

ಶ್ರೀ ಬಿ. ಬಸವಲಿಂಗಪ್ಪ : ಈಗ ಕೊಟ್ಟಿದ್ದೇನಲ್ಲ, ಪಿಹೆಚ್‌ಇ ಡಿಪಾರ್ಟ್‌ಮೆಂಟ್ ಇದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈಗ ನಾವು ಒಂದು ತಾಲ್ಲೂಕು ಸಮಿತಿಯವರು ಸಭೆಯಲ್ಲಿ ಬೋರ್‌ವೆಲ್ ತೆಗೆಸಬೇಕೆಂದು. ಒಂದು ನಿರ್ಣಯ ತೆಗೆದುಕೊಳ್ಳುತ್ತೇವೆ. ನಿರ್ಣಯ ಮಾಡಿದ ಮೇಲೆ ಯಾರನ್ನು ಕೇಳಬೇಕು. ನಾನು ಕೇಳುವುದು ಇಷ್ಟೇ.

ಶ್ರೀ ಬಿ. ಬಸವಲಿಂಗಪ್ಪ : ಇಂಜಿನಿಯರ್ ಡಿಪಾರ್ಟ್‌ಮೆಂಟ್‌ನವರು ನಂಬರ್‌ಗಳನ್ನು ಹೆಚ್ಚುತ್ತಾರೆ, ಪಿಹೆಚ್‌ಇ ಡಿಪಾರ್ಟ್‌ಮೆಂಟ್‌ನವರು ಅಲ್ಲಿ ಇರುತ್ತಾರೆ. ನಿಮಗೆ ಚಿಂತೆ ಬೇಕಾಗಿಲ್ಲ, ನಾನು ಮಾಡಿಸಿ ಕೊಡುತ್ತೇನೆ ಎಂದು ಹೇಳಿದ್ದೇನೆ. ಪ್ರೈವೇಟ್ ಆಗಲಿ ಪಬ್ಲಿಕ್ ಆಗಲಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಜಿಲ್ಲಾ ಪರಿಷತ್ತಿನ ಇಂಜಿನಿಯರಿಂಗ್ ಡಿವಿಜನ್‌ನ ಎಕ್ಸಿಕ್ಯೂಟೀವ್ ಇಂಜಿನಿಯರ್ ಆಗಲಿ, ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಗಳಾಗಲಿ, ಜಿಲ್ಲಾಧಿಕಾರಿಗಳಾಗಲಿ ವಿಭಾಗಾಧಿಕಾರಿಗಳು ಆಗಲಿ ಎಲ್ಲರೂ ಕೊಡತಕ್ಕಂಥ ಉತ್ತರ ಏನು ಅಂದರೆ ನಮ್ಮ ಹತ್ತಿರ ಹಣ ಇಲ್ಲ ಎಂದು

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಅವರು ಏನು ಹೇಳುತ್ತಾರೆ? ದುಡ್ಡು ಎಲ್ಲಿ ಎಂದು ಕೇಳಿದರೆ ಹೇಳುವುದಕ್ಕೆ ಹೆದರುತ್ತಾರೆ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಇವತ್ತು ನಮಗೆ ಬೇಕಾಗಿರುವುದು ಎಷ್ಟು ಹಣ ಬಿಡಗಡೆ ಮಾಡುತ್ತೀರಿ ಎಂದು?

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ : ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ, ಎಷ್ಟು ಹಣಕೊಡುತ್ತೀರಿ? ದಯಮಾಡಿ ಹೇಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ವಿನಂತಿ ಇಷ್ಟೇ ಡಿ.ಸಿ.ಯವರು ಒಂದು ಬೋರ್ ತೆಗೆಯುವುದಕ್ಕೆ ಕೊಡುತ್ತಾರೆ. ಜಿಲ್ಲಾ ಪರಿಷತ್‌ನವರು ಒಂದು ರೇಟ್ ಕೊಡುತ್ತಾರೆ ಜಿಲ್ಲಾ ಪರಿಷತ್‌ನವರು ತೆಗೆಯುತ್ತಾ ರೇಟು ಕಡಿಮೆ ಇರುವುದರಿಂದ, ಇವರ ಬೋರ್‌ಗಳನ್ನು ತೆಗೆಯುತ್ತಾ ಇಲ್ಲ, ಆ ರೇಟ್ ಕೊಡಿ ಎಂದು ಕೇಳುತ್ತಿದ್ದೇವೆ. ಅವರೆಲ್ಲಾ ಅಸೋಸಿಯೇಷನ್ ಮಾಡಿಕೊಂಡು ಬಂದು ತಮ್ಮನ್ನು ಕೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಎಷ್ಟು ಹಣ ಸರ್ಕಾರದಿಂದ ಬಿಡುಗಡೆ ಮಾಡುತ್ತೀರಿ. ದಯಮಾಡಿ ಹೇಳಿ. ಒಂದು ದಿನಕ್ಕೆ ಒಂದು ಕೋಟಿ ರೂಪಾಯಿ, ಎರಡು ಕೋಟಿ ರೂಪಾಯಿ ಮಾಡುತ್ತೀರಾ? ಬೋರ್‌ವೆಲ್‌ಗೆ ಎಷ್ಟು ಹಣ ಬಿಡುಗಡೆ ಮಾಡುತ್ತೀರಿ ಹೇಳಿ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ನೀವು ಹೇಳತಕ್ಕದ್ದಕ್ಕೂ ಮಾಡತಕ್ಕದ್ದಕ್ಕೂ

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್ : ಈಗ ಎಲ್ಲ ಕಡೆಯಿಂದ ಒತ್ತಡ ಬರುತ್ತಿದೆ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಸರ್ಕಾರ ಹೇಳತಕ್ಕ ಮಾಡತಕ್ಕ ಕೆಲಸ ನಿಷ್ಪ್ರಯೋಜನ. ನಾವು ಸಂಪೂರ್ಣವಾಗಿ ಕಳಕಳಿಯಿಂದ ಹೇಳಿದರೂ ಸಹ ಮಾಡತಕ್ಕದ್ದು ಕೇವಲ ಕೆಲಸ. ಪಾರ್ಲಿಮೆಂಟ್ ಎನ್ನುವುದು ಟಾಕಿಂಗ್ ಶಾಪ್ ಎನ್ನುವ ರೀತಿಯಲ್ಲಿ ನಾವು ಹೇಳುತ್ತಿದ್ದೇವೆ. ಅವರೂ ನೋಡುತ್ತಿದ್ದಾರೆ. ಮತ್ತೆ ನಾವು ನೋಡುತ್ತಿದ್ದೇವೆ. ಅವರು ಮತ್ತೆ ಹೇಳುತ್ತಿದ್ದಾರೆ. ಇವತ್ತು ನಿರ್ದಿಷ್ಟವಾಗಿ ಎಷ್ಟು ಬೇಕು ಹಣ ಎನ್ನುವುದಕ್ಕೆ ಅವಧಿ ಬೇಕು. ಹಣ ಬಿಡುಗಡೆ ಮಾಡುವುದಕ್ಕೂ ಅವಧಿ ಬೇಕು. ಇದು ಚಿಂತಜನಕ ಪರಿಸ್ಥಿತಿ. ದಯಮಾಡಿ ನಾವೆಲ್ಲಾ ಸದನದ ಮೂಲಕ ಹೇಳುತ್ತಿದ್ದೇವೆ. ಸರ್ಕಾರ ನಿರ್ದಿಷ್ಟವಾದ ನಿರ್ಣಯ ತೆಗೆದುಕೊಂಡು ಕೆಲಸ ಮಾಡಬೇಕು. ಇಂತಿಷ್ಟು ಹಣ ಕೊಟ್ಟು ಕೆಲಸ ಪ್ರಾರಂಭ ಮಾಡಬೇಕು.

ಅಧ್ಯಕ್ಷರು : ನಿರ್ಣಯವನ್ನು ಅನೌನ್ಸ್ ಮಾಡಿದರಲ್ಲ.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾವು ಊರಿಗೆ ಹೋಗಬೇಕು.

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್ : ಸಮಿತಿ ಮಾಡುತ್ತೇವೆ. ಎಂದು ಹೇಳುತ್ತಾರೆ. ದುಡ್ಡು ಕೊಡುತ್ತೇವೆಂದು ಹೇಳಲಿಲ್ಲ.

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್ : ತಮ್ಮ ಗಮನಕ್ಕೆ ಒಂದು ವಿಷಯ ತರುವುದಾದರೆ ಇದರ ಬಗ್ಗೆ ಎಲ್ಲಾ ಕಡೆಯಿಂದ ಒತ್ತಡ ಬರುತ್ತಿದೆ. ಆದರೂ ಸಹ ಸರ್ಕಾರ ತನ್ನ ನೀತಿಯನ್ನು ಹೇಳಿಲ್ಲ.

ಅಧ್ಯಕ್ಷರು : ಹೇಳುತ್ತಾರೆ.

ಶ್ರೀ ಟಿ.ಎಂ. ಮಂಜುನಾಥ್ : ಹಾಗೆ ಹೇಳಿದರೆ ಆಗುವುದಿಲ್ಲ. ನಾವೂ ಒಂದು ಧರಣಿ ಕುಳಿತುಕೊಳ್ಳಬೇಕಾಗುತ್ತದೆ.

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್ : ಹಣ ಎಷ್ಟು ಬಿಡುಗಡೆ ಮಾಡುತ್ತೀರಿ ಎಂದು ಹೇಳಬೇಕು. ಸರ್ಕಾರ ಒಂದು ನೀತಿ ಅನುಸರಿಸಬೇಕು. ಹಣ ಎಷ್ಟು ಬಿಡುಗಡೆ ಮಾಡುತ್ತೇವೆಂದು ಹೇಳುವುದಕ್ಕೆ ಶಕ್ಯ ಇಲ್ಲ ಎಂದರೆ ನಾವು ಏತಕ್ಕೆ ಬರಬೇಕು? ಅವರು ಅರ್ಥ ಮಾಡಿಕೊಳ್ಳಬೇಕು. ಎಲ್ಲಾ ಕಡೆಯಿಂದ ಒತ್ತಡ ಬರುತ್ತಾ ಇರಬೇಕಾದರೆ ಲಘುವಾಗಿ ನಾನು ಒಂದು ಸ್ಟೇಟ್‌ಮೆಂಟ್ ಕೊಡುತ್ತೇನೆಂದರೆ ಹೇಗೆ? ಅದನ್ನು

ಮಾಡಿದ್ದೇನೆ. ಇದನ್ನು ಮಾಡಿದ್ದೇನೆ ಎಂದು ಹೇಳಿದರೆ ಹೇಗೆ? ಇವತ್ತು ಸದನದಲ್ಲಿ ನೀರಿಗೋಸ್ಕರ, ಜನತೆಯ ನೀರಿನ ಬವಣೆಯನ್ನು ಕಾಪಾಡುವುದಕ್ಕೋಸ್ಕರ, ಬವಣೆಯನ್ನು ಹೋಗಲಾಡಿಸುವುದಕ್ಕೋಸ್ಕರ ಎಷ್ಟು ಹಣ ಬಿಡುಗಡೆ ಮಾಡಿದ್ದೇವೆ ಎಂದು ಸರ್ಕಾರ ಹೇಳತಕ್ಕದ್ದು ಅದರ ಕರ್ತವ್ಯ. ದಯಮಾಡಿ ಸದನದಲ್ಲಿ ತಮ್ಮ ಮೂಲಕ ಕಳಕಳಿಯಿಂದ ಕೇಳುತ್ತಿದ್ದೇವೆ. ಎಷ್ಟು ಹಣ ಬಿಡುಗಡೆ ಮಾಡುತ್ತಾರೆಂದು ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನ್ಯಾಯವಾಗಿ ಹೇಳಬೇಕಾದರೆ ನಾವು ಇದನ್ನು ಸರ್ಕಾರದ ಗಮನಕ್ಕೆ ತರುವಂತಹ ಅಗತ್ಯ ಇದೆಯೇ? ರೆಗ್ಯುಲರ್ ವರ್ಕ್‌ನಲ್ಲಿ ಡಿಸಿಗೆ ಏಕೆ ಇವರು ಜಾಸ್ತಿ ರೇಟ್ ಕೊಟ್ಟರು? ಇವರ ಇಂಟೆನ್‌ಷನ್ ಏನು?

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಜಿಲ್ಲಾಧಿಕಾರಿಗಳು

(ಗೊಂದಲ)

ಅಧ್ಯಕ್ಷರು : ನೀವು ಹೇಳಿದ್ದುದು ಆಗಿದೆ. ಹೇಳದೆ ಇರುವವರಿಗೆ ಅವಕಾಶ ಮಾಡಿ ಕೊಡೋಣ .

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ಅನೇಕ ಮಾನ್ಯ ಸದಸ್ಯರು ಕುಡಿಯುವ ನೀರಿನ ಬಗ್ಗೆ ತಮ್ಮ ಕಳವಳವನ್ನು ವ್ಯಕ್ತಪಡಿಸಿದ್ದಾರೆ, ಕೆಲಸ ಸಮರ್ಪಕವಾದ ರೀತಿಯಲ್ಲಿ ನಡೆದಿಲ್ಲ ಎನ್ನುವುದನ್ನು ಕೂಡ ತಮ್ಮ ಗಮನಕ್ಕೆ ತಂದಿದ್ದಾರೆ. ಒಂದು ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಮೊನ್ನೆ ಈ ಸೆಷನ್ ಪ್ರಾರಂಭವಾದ ಎರಡು ದಿವಸದಲ್ಲಿ ಏನು ಚರ್ಚೆ ನಡೆಯಿತು, ಈ ಚರ್ಚೆಯಲ್ಲಿ ಇದರ ಬಗ್ಗೆ ಸಾಕಷ್ಟು ವಿಷಯ ಹೇಳಿದ್ದಾರೆ. ಮತ್ತು ತತ್‌ಕ್ಷಣ ಅಂದರೆ 15-16ನೇ ತಾರೀಖಿನ ದಿವಸ ಸುಮಾರು ನಾಲ್ಕೂವರೆ ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ಪ್ರತಿಯೊಂದು ಜಿಲ್ಲೆಗೂ ಕೂಡ. ಮತ್ತು ಡೆಪ್ಯುಟಿ ಕಮೀಷನ್‌ರಗಳಿಗೆ ನಾನು ಸ್ಪಷ್ಟವಾಗಿ ಆದೇಶ ನೀಡಿ ನೀವು ಯಾವುದಾದರೂ ರೇಟ್‌ನ್ನು ಕೊಟ್ಟಕೊಳ್ಳಿ, ಆದರೆ ಅಗತ್ಯವಿರುವಲ್ಲಿ ಬೋರ್‌ವೆಲ್ ಹಾಕಿ ನೀರಿನ ವ್ಯವಸ್ಥೆ ಮಾಡಿಕೊಡಬೇಕೆಂದು ಹೇಳಿದ ಮೇಲೆ, ಈ ಒಂದು ಸ್ಕೇರ್‌ಸಿಟಿ ಅಫೆಕ್ಟೆಡ್ ಏರಿಯಾದಲ್ಲಿ ಡಿಸಿಯವರು ಆ ಕೆಲಸವನ್ನು ತೆಗೆದುಕೊಳ್ಳುತ್ತಿದ್ದಾರೆ. ಈ ವಿಚಾರವನ್ನು ಮಾನ್ಯ ಸದಸ್ಯರು ಒಪ್ಪುತ್ತಾರೆಂದು ನಾನು ತಿಳಿಯುತ್ತೇನೆ. ಐದು ರೂಪಾಯಿಗಳ ರೇಟ್ ಜಾಸ್ತಿಯಾದರೂ ಪರವಾಗಿಲ್ಲ ಕೆಲಸವನ್ನು ಮಾಡಿಸಿ ಎಂದು ಹೇಳಿದ್ದೇನೆ. ಅಷ್ಟೇ ಅಲ್ಲ ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೂ ಕೂಡ ಹೇಳಿದ್ದೇನೆ. ನೀವು ರಿವ್ಯೂ ಮಾಡುವಾಗ ಎಲ್ಲಿ ಈ ತೊಂದರೆಗಳು ಬರುತ್ತವೆ, ನಮ್ಮ ಇಲಾಖೆಯ ವತಿಯಿಂದ ಏನು ಹಣವನ್ನು ಬಿಡುಗಡೆ ಮಾಡುತ್ತೇವೆ, ಆ ಹಣವನ್ನು ಐದು ರೂಪಾಯಿಗಳಷ್ಟು ಹೆಚ್ಚಿಗೆ ಖರ್ಚಾದರೂ ಚಿಂತೆಯಲ್ಲಿ, ನೀವೂ ಆ ರೇಟ್‌ನ್ನು ಕೊಟ್ಟು ಅಲ್ಲಿ ನೀರಿನ ವ್ಯವಸ್ಥೆಯನ್ನು ನಮ್ಮ ಉದ್ದೇಶದ ಪ್ರಕಾರ ಮಾಡಿ ಎಂದು ಹೇಳಿದ್ದೇನೆ. ಬಹುಶಃ ಕೆಲವು ಜಿಲ್ಲಾ ಮಂತ್ರಿಗಳು ಅದನ್ನು ಇಂಪ್ಲಿಮೆಂಟ್ ಮಾಡುತ್ತಾ ಇದ್ದಾರೆ, ಕೆಲವು ಡಿಸಿಗಳು ಕೂಡ ಅದನ್ನು ನೇರವಾಗಿ ತೆಗೆದುಕೊಳ್ಳುತ್ತಾ ಇದ್ದಾರೆ. ಮೊನ್ನೆ ಮಾನ್ಯ ಸದಸ್ಯರಾದ ಬನ್ನಿಕೋಡ್‌ರವರು ಬಂದು ಈ ಬಗ್ಗೆ ಡಿಸಿಗೆ ಹೇಳಬೇಕೆಂದು ಕೇಳಿದರು. ತತ್‌ಕ್ಷಣ ನಾನು ಡಿಸಿಯವರಿಗೆ ಹೇಳಿದ್ದು ಬಹುಶಃ ಅವರಲ್ಲಿಯೂ ಕೂಡ ಕೆಲಸ ನಡೆದಿರಬಹುದು.

ಶ್ರೀ ಬಿ.ಎಚ್. ಬನ್ನಿಕೋಡ್ : ಮಾನ್ಯ ಸಚಿವರು ಹೇಳುತ್ತಿರುವುದು ನಿಜ. ಈ ಸದನದಲ್ಲಿ ಅಷ್ಟು ಹೇಳಿ ತಾವುಗಳು ಅವಕಾಶ ಕೊಟ್ಟ ಮೇಲೆ ಇಲ್ಲಿಂದ ಟೆಲಿಕ್ಸ್‌ಮಾಡಿ ಒಂದು ಡ್ರಿಲ್‌ಮಿಶನ್ ಅಲ್ಲಿಗೆ ಕಳುಹಿಸಿದರೆ, ಒಂದು ವಾರ ಒಂದು ಹಳ್ಳಿಯಲ್ಲಿ ನಿಂತು ಒಂದು ಬೋರ್‌ವೆಲ್‌ನ್ನು ಕೂಡ ಕೊರೆಯಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ನನ್ನ ಹತ್ತಿರ ಬಂದ ಕೂಡಲೇ.

ಶ್ರೀ ಬಿ.ಎಚ್. ಬನ್ನಿಕೋಡ್ : 60 ಬೋರ್‌ವೆಲ್ ಹಾಕಬೇಕಾಗಿದ್ದು ಒಂದೂ ಕೂಡ ಹಾಕಲಿಲ್ಲ, ಮತ್ತೆ ಪುನಃ ಮಾನ್ಯ ಸಚಿವರಿಗೆ ಬಂದು ಹೇಳಿದೆ. ಅದರ ಮೇಲೆ ಇವರು ಸೂಚನೆ ಕೊಟ್ಟ ಮೇಲೆ ಮತ್ತು ಕೆಲಸವನ್ನು ಪ್ರಾರಂಭ ಮಾಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸದಸ್ಯರು ನನಗೆ ಹೇಳಿದ್ದನ್ನು ನಾನು ಹೇಳಿದ್ದೇನೆ. ಈಗ ಒಂದು ಐದಾರು ಬೋರ್‌ವೆಲ್‌ಗಳನ್ನು ಮಾಡಿದ್ದಾರೆ, ಇನ್ನೂ ತಾವುಗಳು ಇನ್ಸಸ್ಟ್ರಕ್ಷನ್ ಕೊಟ್ಟರೆ ತತ್‌ಕ್ಷಣ ಆಗುತ್ತದೆ ಅದಕ್ಕೆ ನೀವು ಇನ್ನೊಂದು ಸಾರಿ ಹೇಳಿ ಎಂದು ನನಗೆ ಹೇಳಿದ್ದಾರೆ. ಅದನ್ನು ಬಿಟ್ಟು ಈಗ ಮಾನ್ಯ ಸದಸ್ಯರು ಒಂದೇ ಬೋರ್‌ವೆಲ್. ಏನೂ ಆಗಲೇ ಇಲ್ಲ ಎಂದು ಹೇಳಿದರೆ ನಾನು ನನ್ನ ದುರ್ದೈವ ಎಂದು ತಿಳಿದುಕೊಳ್ಳುತ್ತೇನೆ. ನಾನು ಈ ಬಗ್ಗೆ ಸ್ಪಷ್ಟವಾದಂಥ ಆದೇಶವನ್ನು ಕೊಟ್ಟಿದ್ದೇನೆ. ಇಲ್ಲಿರತಕ್ಕಂಥ ಪ್ರಶ್ನೆ ಇಷ್ಟೆ, ಯಾವ ರೀತಿಯಾಗಿ ಡಿಸಿಯವರು ಸ್ವಲ್ಪ ಹೆಚ್ಚಿಗೆ ರೇಟ್ ಕೊಟ್ಟು ಕೆಲಸವನ್ನು ಪ್ರಾರಂಭ ಮಾಡುತ್ತಾ ಇದ್ದಾರೆ ಅದೇ ರೀತಿಯಾಗಿ ಜಿಲ್ಲಾ ಪರಿಷತ್‌ನವರು ಕೂಡ ಅವರಲ್ಲಿರುವಂಥ ಹಣ ಖರ್ಚು ಮಾಡಲಿ ಅದಕ್ಕೆ ಆದೇಶ ಕೊಡಿ ಎಂಬುದು ನಮ್ಮ ಮಾನ್ಯ ಸದಸ್ಯರ ಆಗ್ರಹ ಇದೆ....

ಅಧ್ಯಕ್ಷರು : ಅದಕ್ಕೆ ತೊಂದರೆ ಏನು ಇದೆ? ಏಕೆ ಆದೇಶವನ್ನು ಕೊಡಬೇಕು? How does the Government come into the picture?

SRI M. MALLIKARJUNA KHARGE :Zilla parishat people can take a decision.

(Interruptions)

MR. SPEAKER : Within the frame work of the Zilla Parishath Act, the Chief Secretary functions as a sub-ordinata of the Zilla Parishat. Why should he be governed by the dictates of the Government.

(Interruptions)

MR. SPEAKER : Zilla Parishats have failed indischarging the responsibility and the powers that they have.

(Interruptions)

MR. SPEAKER : In the case of Chief Secretaries who do not address themselves to such burning problems, action should be initiated by the Zilla Parishads.

SRI R.V. DESHAPANDE : I want to make a submission.

(Interruptions)

MR. SPEAKER : Mr. Deshapande, would you kindly control your Members?

SRI R.V. DESHAPANDE : Sir, I understand.

MR. SPEAKER : You are trying to make a submission to me. Do you think it is right that all of them should stand up at a time?

SRI R.V. DESHAPANDE : You are right.

MR. SPEAKER : I would like to get a response from you about the proposition which I have made.

SRI R.V. DESHAPANDA : I understand what you say and I fully agree with you. It is a fact that under the Zilla Parishat Act, the Zilla Parishats are compmetent to fix up the rates and Chief Secrectary is bound by the decisions of Zilla Parishats. If the Chief Secretary does not come up to the expectation, then I fully agree with your observation. But the practical difficulties are, the Government has directed the Zilla Parishats that they should not give a rate beyond a particular level.

MR. SPEAKER: Government cannot give such direction.

(Interruptions)

(ಗೊಂದಲ)

Sri R. V. Deshapande: They have issued directions to Zilla Parishats that they should give a particular rate. They are finding some excuses to see that the Zilla Parishats are brought in trouble. What wrong is there, if the Hon'ble Minister who has issued directions to Zilla Parishats to Pay a particular rate, withdraws that circular? If the Minister is wise, on your remarks he should quietly withdraw the circular which he has sent to Zilla Parishats.

(ಗೊಂದಲ)

Mr. Speaker : I am not making any remarks on any Minister. I am confining myself to the powers that the Zilla parishats enjoy. under the Act which has been passed by this August House. My limited knowledge regarding the functioning of the zilla parishats it that.

(ಗೊಂದಲ)

ಶ್ರೀ ಸಿ. ಬೈರೇಗೌಡ : ಇದರಲ್ಲಿ ಏನಾಗಿದೆ ಎಂದರೆ ಪ್ರತಿಯೊಂದು ಸರ್ಕಲ್‌ನಲ್ಲಿ ಕೂಡ ಷೆಡ್ಯೂಲ್ ಆಫ್ ರೇಟ್ಸ್ ಎಂದು ಮಾಡುತ್ತಾರೆ. ಅಲ್ಲಿ ಇಂಜಿನಿಯರ್ಸ್ ಕುಳಿತು ಷೆಡ್ಯೂಲ್ ಆಫ್ ರೇಟ್ಸ್ ಎಂದು ಮಾಡುತ್ತಾರೆ. Schedule is approved by the Government. ಅದಕ್ಕಿಂತ ಹೆಚ್ಚಾಗಿ ಕೊಡಬೇಕಾಗಿದ್ದರೆ Schedule of rates of rates must be revised. For revision of schedule rates, the zilla parishats have no powers.

ಅದಕ್ಕೆ ಸರ್ಕಾರದವರು ಕೂಡಾ ಅಪ್ರೂವಲ್‌ನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು : ಜಿಲ್ಲಾ ಪರಿಷತ್ತಿಗೆ ಪವರ್ ಏನಿದೆ?

ಶ್ರೀ ಸಿ. ಬೈರೇಗೌಡ : ಪವರ್ ಏನೂ ಇಲ್ಲ.

ಅಧ್ಯಕ್ಷರು : ಮತ್ತೆ ಏತಕ್ಕೆ ಪರದಾಡುತ್ತಿದ್ದೀರಿ ಇಷ್ಟು? ಜಿಲ್ಲಾ ಪರಿಷತ್ತಿಗೆ ಹೋಯಿತು. ಎಂದು ಹೇಳುತ್ತೀರಿ, ಜಿಲ್ಲಾಪರಿಷತ್ತಿಗೆ ಏನು ಇದೆ?

(ಗೊಂದಲ)

ಶ್ರೀ ಸಿ. ಬೈರೇಗೌಡ : ಷೆಡ್ಯೂಲ್ಡ್ ರಿವೈಸ್ಡ್ ಆಗಬೇಕಾಗಿರುವ ಕಾರಣದಿಂದಾಗಿ ಅದಕ್ಕೆ ಅವರು ಚೀಫ್ ಸೆಕ್ರೆಟರಿಯವರು ಹೇಳುತ್ತಾರೆ. ಅದನ್ನು ಮೀರಿ ನಾವು

ಕೊಡುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ, ಪೆಡ್ಯೂಲ್‌ನ್ನು ರಿವೈಸ್ ಮಾಡತಕ್ಕಂಥದ್ದು, ರೇಟನ್ನು ಕೊಡತಕ್ಕಂಥದ್ದು ಅದಕ್ಕೆ ಸರ್ಕಾರದ ನಿರ್ದೇಶನ ಬೇಕಾಗಿದೆ. ತಾವು ಕೂಡ ಏನು ಅರ್ಥಮಾಡಿಕೊಂಡಿದ್ದೀರಿ, ರಿಲೀಫ್‌ನಲ್ಲಿ ಕೊಡತಕ್ಕಂಥ 200-220 ರೂಪಾಯಿಯನ್ನು ಕೊಡುತ್ತಿದ್ದೀರಿ, ಆ ರೀತಿ ಒಂದು ಕಡೆ ಕೊಡುತ್ತಿರುವಾಗ ಇನ್ನೊಂದು ಕಡೆ 120 ರೂಪಾಯಿಗೆ ಒಂದು ಕೊಳವೆ ಬಾವಿಯನ್ನು ಹಾಕುವುದಕ್ಕೆ ಯಾರು ಬರುತ್ತಾರೆ? ಇದು ಇವತ್ತು ಸಮಸ್ಯೆ ಇರತಕ್ಕಂಥದ್ದು.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ : ನಾವು ಸುತ್ತೋಲೆಗಳನ್ನು ಕಳುಹಿಸಿದ್ದುದು ನಿಜ. ಪ್ರೈವೇಟ್‌ನವರಿಗೆ ಅಂಥ ರೇಟ್‌ನಲ್ಲಿ ಕೊಡಬೇಕು ಎಂದು ಹೇಳಿದ್ದೆವು. ಈಗ ಬದಲಾವಣೆ ಆಗಿರತಕ್ಕಂಥ ಪರಿಸ್ಥಿತಿಯಲ್ಲಿ ತಾವು ಹೇಳಿದ್ದೀರಿ. ಅದನ್ನು ನಾನು ಒಪ್ಪುತ್ತೇನೆ ಎಂದು ಹೇಳಿದರೂ ಪುನಃ ನೀವು ಹೇಳುತ್ತಿದ್ದೀರಿ. ಆಗಲೇ ನಾನು ಹೇಳಿದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಅಧ್ಯಕ್ಷರೇ,

(ಗೊಂದಲ)

ಅಧ್ಯಕ್ಷರು : ಕೌಜಲಗಿಯವರೇ ಒಂದು ನಿಮಿಷ ತಾವು ಕುಳಿತುಕೊಳ್ಳಿ. ಮಾನ್ಯ ಮಂತ್ರಿಗಳು ಹೇಳಿದ್ದಾರೆ, ಯಾವುದೋ ಪರಿಸ್ಥಿತಿಯಲ್ಲಿ ಆ ಸುತ್ತೋಲೆಯನ್ನು ಕಳುಹಿಸಲಾಗಿತ್ತು. ಈಗ ನಾನು ನೀವು ಹೇಳುತ್ತಿರತಕ್ಕಂಥ ಮಾತನ್ನು ನಾನು ಒಪ್ಪುತ್ತಿದ್ದೇನೆ ಎಂದು ಈ ಸದನದ ಮುಂದೆ ಹೇಳಿದ್ದಾರೆ. ಆದುದರಿಂದ ಅದರ Follow-up action will be taken today itself.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಈಗ ಸರ್ಕಾರದ ಗಮನಕ್ಕೆ ಮುಖ್ಯವಾಗಿ ತರಬೇಕಾಗಿರತಕ್ಕಂಥದ್ದು ಎರಡು ವಿಷಯಗಳು ಒಂದು ವಿಚಾರದಲ್ಲಿ ಮಾನ್ಯ ಮಂತ್ರಿಗಳು ಈಗ ಒಪ್ಪಿಕೊಂಡಿದ್ದಾರೆ, ನಾವು ಹಿಂದೆ ಬೇರೆ ಅನೇಕ ವಿಚಾರದಲ್ಲಿ ಸರ್ಕ್ಯುಲರನ್ನು ಕಳುಹಿಸಿದ್ದಾರೆ. ಈ ಸರ್ಕ್ಯುಲರ್ ಚೀಫ್ ಸೆಕ್ರೆಟರಿಗೆ ರೆಸ್ಟ್ರಿಕ್ಷನ್‌ನ್ನು ಹಾಕಿದೆ. ತಾವು ಕಾನೂನು ಬದ್ಧವಾಗಿ, ಜಿಲ್ಲಾ ಪರಿಷತ್ತಿನ ಅಧಿಕಾರದ ಬಗ್ಗೆ ಮಾತನಾಡಿ. ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಗಳು ಸಂಪೂರ್ಣವಾಗಿ ವಿಫಲರಾಗಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಿದರೆ ಏತಕ್ಕೆ ವಿಫಲರಾಗಿದ್ದಾರೆ ಎಂದರೆ ಈ ಚೀಫ್ ಸೆಕ್ರೆಟರಿಗಳನ್ನು ಡೆಪ್ಯುಟ್ ಮಾಡತಕ್ಕಂಥ ಪವರ್, ಅಧಿಕಾರ ಅವರಿಗೆ ಇದೆ. ಅವರು ಐಎಎಸ್ ಅಧಿಕಾರಿಗಳು. ಅವರನ್ನು ಯಾವತ್ತೂ ಬೇಕಾದರೆ ವಾಪಸ್ ತೆಗೆದುಕೊಳ್ಳಬಹುದು. ಇವರು ಓರಲ್ ಇನ್ಸ್‌ಟ್ರಕ್ಷನ್ಸ್ ಕೊಟ್ಟರೂ ಸಹಿತ ಅವರನ್ನು ತೆಗೆದುಕೊಳ್ಳಬೇಕಾಗುತ್ತದೆ. ಆಗ ಇವರು ರಿಟನ್ ಸರ್ಕ್ಯುಲರ್‌ನ್ನು ಕೊಡುತ್ತೇವೆ ಎನ್ನತಕ್ಕಂಥದ್ದನ್ನು ಮಾನ್ಯ ಮಂತ್ರಿಗಳೇ ಒಪ್ಪಿಕೊಂಡಿರುವುದರಿಂದಾಗಿ ಅದನ್ನು ಮಾಡಲಿಕ್ಕೆ ಆಗಿಲ್ಲ, ಇದನ್ನು ರಿವೈಸ್ ಮಾಡತಕ್ಕಂಥದ್ದನ್ನು ಅವರು ಒಪ್ಪಿಕೊಂಡಿದ್ದಾರೆ. ಈಗ ನಾವು ಮಾನ್ಯಮಂತ್ರಿಗಳಲ್ಲಿ ಮುಖ್ಯವಾಗಿ ಕೇಳತಕ್ಕಂಥದ್ದು ಏನೆಂದರೆ ಬೇರೆ ಏನೂ ಅಲ್ಲ, ಹಣ ಕಡಿಮೆ ಇದೆ. ದಯವಿಟ್ಟು ಹಣವನ್ನು ಬಿಡುಗಡೆ ಮಾಡಿ. ಎಷ್ಟು ಹಣವನ್ನು ಬಿಡುಗಡೆ ಮಾಡುತ್ತೀರಿ? ಇದು ಒಂದನ್ನೆ ನಾವು ಕೇಳುವುದು. ಬಾಕಿ ನೀವು ಯಾರ ಕೈಯಲ್ಲಿ ಮಾಡಿಸುತ್ತೀರಿ? ಜಿಲ್ಲಾ ಪರಿಷತ್ತುಗಳು ಸತ್ತು ಕುಳಿತಿವೆ. ಇನ್ನು ಅವುಗಳನ್ನು ಬದುಕಿಸುವುದಕ್ಕೆ ಆಗುವುದಿಲ್ಲ. ನಿಮ್ಮ ಸರ್ಕಾರ ಇರುವವರೆಗೂ ಸಹಿತ ಅವುಗಳನ್ನು ಬದುಕಿಸುವುದಕ್ಕೆ ಆಗುವುದಿಲ್ಲ ಎಂದು ನಮಗೆ ಗೊತ್ತಿದೆ. ಈಗ ಪ್ರಶ್ನೆ ಇರತಕ್ಕಂಥದ್ದು ಅದರ ಜೀವ ಆರೇ ತಿಂಗಳು. ನಾವು ಅದರ ಬಗ್ಗೆ

ಕೇಳುತ್ತಿಲ್ಲ. ನಾವು ಕೇಳುತ್ತಿರುವುದು ರಾಜ್ಯದ ಜನರಿಗೆ ಕುಡಿಯುವ ನೀರಿಗೆ ತೊಂದರೆಯಾಗಿದೆ, ನಿಮ್ಮ ಭಾಷಣ ಸಾಕಾಗಿದೆ. ನಿಮ್ಮ ಘೋಷಣೆಗಳು ಸಾಕಾಗಿದೆ. ದಯವಿಟ್ಟು ಎಷ್ಟು ದುಡ್ಡು ಕೊಡುತ್ತೀರಿ? ಎಷ್ಟು ಕೊಡುತ್ತೀರೋ ಕೊಡಿ ಎನ್ನತಕ್ಕಂಥದ್ದು. ಈಗ ನೀವು ಕಮಿಟಿಗಳನ್ನು ಮಾಡಿದ್ದೀರಿ, ನಾವು ಯಾರಿಗೆ ಹೇಳುವುದು? ಚೀಫ್ ಸೆಕ್ರೆಟರಿಯವರಿಗೆ ಹೇಳಿದರೆ, ಜಿಲ್ಲಾಧಿಕಾರಿಗಳಿಗೆ ಹೇಳಿದರೆ, ಡಿವಿಜನಲ್ ಕಮಿಷನರ್‌ಗೆ ಹೇಳಿದರೆ ಅವರು ನಗುತ್ತಾರೆ. ದುಡ್ಡಿಲ್ಲ ಎಂದು ಅವರು ಹೇಳುವುದಿಲ್ಲ, ಅವರು ನಗುತ್ತಾರೆ. ಆದುದರಿಂದ ದಯವಿಟ್ಟು ನಾನು ಇವತ್ತು ಇಷ್ಟು ಹಣ ಬಿಡುಗಡೆ ಮಾಡುತ್ತಿದ್ದೇನೆ ಎಂದು ತಾವು ಹೇಳಿ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಸದಸ್ಯರ ಸಲಹೆಯನ್ನು ನಾನು ಒಪ್ಪುತ್ತೇನೆ. ಈಗ ನಾನು ಹಿಂದೆ ಹೇಳಿದ್ದನ್ನು ಪುನಃ ರಿಪೀಟ್ ಮಾಡಬಾರದು ಎಂದು ನಾನು ಮಾಡುತ್ತಿಲ್ಲ, ಈಗ 15-50 ಕೋಟಿ ರೂಪಾಯಿಗಳನ್ನು ಡೈವರ್ಟ್ ಮಾಡಬೇಕು ಎಂದು ತೀರ್ಮಾನವನ್ನು ತೆಗೆದುಕೊಂಡಿದ್ದೆವು. ಅವರ ಪ್ರಕಾರ ಹೈಕೋರ್ಟ್‌ಗೆ ಹೋಯಿತು. ಅದೆಲ್ಲಾ ತಮಗೆ ಗೊತ್ತಿದೆ. ಅದನ್ನು ಡೈವರ್‌ಷನ್ ಮಾಡಿದ್ದುದು ಸರಿ ಎಂದು ಅವರು ಒಪ್ಪಿಕೊಂಡಿದ್ದಾರೆ. ಈಗ 15.50 ಕೋಟಿ ರೂಪಾಯಿಗಳು ಇದ್ದೇ ಇದೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ಸದನವನ್ನು ತಪ್ಪು ದಾರಿಗೆ ತೆಗೆದುಕೊಂಡು ಹೋಗುತ್ತಿದ್ದೀರಿ. ನಾನು ನಿಮಗೆ ಸಬ್‌ಮಿಟ್ ಮಾಡುತ್ತಿದ್ದೇನೆ. ರೆಗ್ಯುಲರ್ ಆಕ್ಷನ್ ಪ್ಲಾನ್‌ನಲ್ಲಿ Zilla Parishad Action plan, which has been approved by the Government.

ಅದರಲ್ಲಿ ಎನ್.ಆರ್.ಡಬ್ಲ್ಯೂ. ಎ.ಆರ್.ಡಬ್ಲ್ಯೂ. ಮಿನಿವಾಟರ್ ಸಪ್ಲೈಗೆ, ಸೆಂಟ್ರಲ್ ಸೆಕ್ಟಾರ್, ಸ್ಟೇಟ್ ಸೆಕ್ಟಾರ್‌ಗೆ ಅಲೋಕೇಟ್ ಮಾಡತಕ್ಕಂಥ ದುಡ್ಡಿಗೋಸ್ಕರ ಕುಡಿಯುವ ನೀರಿಗಾಗಿ ಕೊಡುತ್ತಿದ್ದುದನ್ನು ಅದನ್ನು ಡೈವರ್ಟ್ ಮಾಡಲಿಕ್ಕೆ ಹೊರಟಿದ್ದಾರೆ, ಆದರಿಂದ ಏನು ಉಪಯೋಗ? What I am asking is,

ನಾರ್ಮಲ್ ಪ್ರೋಗ್ರಾಮ್ ಇದ್ದದ್ದೇ ಮಾಡುತ್ತಿದ್ದೀರಿ, ನಾರ್ಮಲ್ ಪ್ರೋಗ್ರಾಮ್ ಯಾವಾಗ ಮಾಡಿದ್ದುದು? ಸ್ಕೇರ್‌ಸಿಟಿ ಇರುವುದಿಲ್ಲ ಎಂದು ಹೇಳಿ ಮಾಡಿದ್ದುದು. ಈಗ ಸ್ಕೇರ್‌ಸಿಟಿ ಇರುವುದರಿಂದ ಅಡಿಷನಲ್‌ಫಂಡ್ಸ್ ಎಷ್ಟು ಕೊಡುತ್ತಿದ್ದೀರಿ ನೀವು. ಅದನ್ನು ಹೇಳಿ. That is what we want.

ಶ್ರೀ ಬಿ. ಬಸವಲಿಂಗಪ್ಪ : ಆ ಪಾಯಿಂಟ್‌ನ ಬಗ್ಗೆ ಹೇಳುತ್ತಿದ್ದೇನೆ. ಈಗ ನಮ್ಮ ನಾರ್ಮಲ್ ಫಂಡ್‌ನಲ್ಲಿ ಈಗ ನಮ್ಮ ಹತ್ತಿರ 6.52.ಕೋಟಿ ರೂಪಾಯಿಗಳು ಇದೆ. ಅದನ್ನು ಇಟ್ಟುಕೊಂಡು ನೀವು ಖರ್ಚು ಮಾಡಿ, ಪುನಃ ನಿಮಗೆ ಹಣವನ್ನು ಒದಗಿಸುವುದಕ್ಕೆ ಕೊರತೆ ಇಲ್ಲ ಎನ್ನುವಷ್ಟು ಪ್ರಯತ್ನಮಾಡುತ್ತೇನೆ ಎಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿರ್ದಿಷ್ಟವಾಗಿ ಹೇಳಿ?

ಶ್ರೀ ಬಿ. ಬಸವಲಿಂಗಪ್ಪ : ಹೇಳುವುದಕ್ಕಾಗುವುದಿಲ್ಲ, ಅದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕಳೆದ ಒಂದು ತಿಂಗಳಿಂದ ಕೇಳುತ್ತಿದ್ದೇವೆ.

ಮಾರ್ಚ್ ಒಂದನೇ ತಾರೀಖಿನಿಂದ ನಿಮಗೆ ಕೇಳುತ್ತಿದ್ದೇವೆ. ಆಡಳಿತ ಪಕ್ಷದ....

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : 6.52 ಕೋಟಿ ರೂಪಾಯಿಗಳ ಬಗ್ಗೆ ಮಾನ್ಯ ಸಚಿವರು ಹೇಳುವ ಅವಶ್ಯಕತೆ ಇಲ್ಲ, ಅದರ ಬಗ್ಗೆ ಅವರು ಏತಕ್ಕೆ ಹೇಳಬೇಕು. ನಾರ್ಮಲ್ ಪ್ರೋಗ್ರಾಂ ಬಗ್ಗೆ ಎಲ್ಲರಿಗೂ ಗೊತ್ತಿದೆ. ಅದು ಬಜೆಟ್‌ನಲ್ಲಿಯೂ ಇದೆ.

ಜಿಲ್ಲಾ ಪರಿಷತ್ತಿನಲ್ಲಿ ಎಲ್ಲಾ ಹಣ ಇದೆ. ಅವರು ಮಾಡುತ್ತಾರೆ. ಈ ಮನೆಯಲ್ಲಿ ಎಲ್ಲರೂ ಪಕ್ಷಭೇದವನ್ನು ನಮಗೆ ಬಿಟ್ಟು ಮನವಿಯನ್ನು ಮಾಡುತ್ತಿದ್ದಾರೆ. ಯಾವುದೋ You should know and realise the seriousness of the issue and you should come up very clearly, ಹತ್ತು ಕೋಟಿ ರೂಪಾಯಿ, 20 ಕೋಟಿ ರೂಪಾಯಿ ಅಡಿಷನಲ್ ಆಗಿ ಕೊಡುತ್ತೇವೆ ಎಂದು ನಿರ್ದಿಷ್ಟವಾಗಿ ಹೇಳಿ?

(ಗೊಂದಲ)

ಅಧ್ಯಕ್ಷರು : ಅವರು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈ ತಾಲ್ಲೂಕು ಸಮಿತಿ ರಚನೆಯನ್ನು ಮಾಡುತ್ತೇವೆ ಎಂದು ಹೇಳಿದ್ದೀರಿ. ಈ ಸಮಿತಿಯ ಕೆಲಸವೇನು? ಸುಮ್ಮನೆ ಕುಳಿತುಕೊಂಡು ಕೊಳವೆ ಬಾವಿ ಎನ್ನುವುದೇ?

ಅಧ್ಯಕ್ಷರು : ಕುಡಿಯುವ ನೀರನ್ನು ಒದಗಿಸಿಕೊಡುವುದು.

ಶ್ರೀ ವಾಟಾಳ್ ನಾಗರಾಜ್ : ಈ ಸಮಿತಿಯವರು ಯಾರಿಗೆ ಹೇಳಬೇಕು.

ಅಧ್ಯಕ್ಷರು : ಕೊರತೆ ಇಲ್ಲ, ದುಡ್ಡು ಅವರು ಕೊಡುತ್ತೇವೆ ಎಂದು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಎಲ್ಲಿ ಸ್ವಾಮಿ ಒದಗಿಸಿಲ್ಲ.

ಅಧ್ಯಕ್ಷರು : ಎಷ್ಟು ಬೇಕಾದರೂ ಒದಗಿಸಿಕೊಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಈ ಸಭೆಯಲ್ಲಿ ಒಂದು ಆಶ್ವಾಸನೆಯನ್ನು ಅವರು ಕೊಡಲಿ. ಇಷ್ಟು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ ಎಂದು ಹೇಳಲಿ.

ಶ್ರೀ ಬಿ. ಬಸವಲಿಂಗಪ್ಪ : ನಿಮಗೆ ಸಂಶಯ ಬೇಕಾಗಿಲ್ಲ, ಪಂಚಾಯಿತಿ ಸಮಿತಿ, ಪಂಚಾಯಿತಿ ಅಧ್ಯಕ್ಷರ ತರಹ ಅವರ ಅಧ್ಯಕ್ಷತೆಯಲ್ಲಿ ಇವತ್ತು ಒಂದು ಕಮಿಟಿಯನ್ನು ಮಾಡಿದ್ದೇವೆ. ಅವರು ಯಾವ ಹಳ್ಳಿಗಳಲ್ಲಿ, ಯಾವ ಪ್ರದೇಶಗಳಲ್ಲಿ ಈ ಅಭಾವ ಇದೆ. ಇಂಥ ಒಂದು ಕೆಲಸವನ್ನು ಮಾಡಬೇಕು ಎಂದು ಹೇಳಿ ತೀರ್ಮಾನವನ್ನು ತೆಗೆದುಕೊಂಡು ಕೆಲಸವನ್ನು ಮಾಡಲಿ. ಕೆಲಸವನ್ನು ಮಾಡದೇ ಇದ್ದಾಗ, ನಿಮ್ಮ ಮಾತಿಗೆ ಅವಕಾಶ ಉಂಟು.

(ಗೊಂದಲಮಯ ವಾತಾವರಣ)

MR. SPEAKER : Why don't you be reasonable with the Minister?

SRI R.V. DESHPANDE : I can understand the difficulties of the Minister. ಅವರಿಗೆ ಸಮಯ ಬೇಕಾದರೆ ಕೊಡೋಣ. ಇವತ್ತು ಸಂಜೆ ಆದರೂ ಹೇಳಲಿ.

MR.SPEAKER : Alright, Mr.Minister, before we adjourn, please make a statement on this.

(ಗೊಂದಲ)

MR. SPEAKER : I do not think this a correct statement of fact.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈಗ ಸರ್ಕಾರ ತತ್ವಶಃ ಹಣವನ್ನು ಡೈವರ್ಟ್ ಮಾಡಿರತಕ್ಕಂಥಾದ್ದನ್ನು ಬಿಟ್ಟು, ರೆಗ್ಯುಲರ್ ಆಕ್ಷನ್ ಪ್ರೋಗ್ರಾಂನಲ್ಲಿ ಈ ಪರ್‌ಪಸ್‌ಗೋಸ್ಕರ ಇಟ್ಟಿರತಕ್ಕ ಹಣವನ್ನು ಬಿಟ್ಟು, ಸ್ಕೇರ್‌ಸಿಟಿ ವರ್ಕ್ಸ್‌ಗೆ, ಕುಡಿಯುವ ನೀರಿಗಾಗಿ ಅಡಿಷನಲ್ ಅಮೌಂಟ್ ಎಷ್ಟು ಹಣ ರಿಲೀಸ್ ಮಾಡುತ್ತೀರಿ ಹೇಳಿ.

ಸಭಾಧ್ಯಕ್ಷರು : ಅದನ್ನು ಅವರು ಹೇಳಿದ್ದಾರೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ರಾಜಕೀಯವಾಗಿ ಲಾಭ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ. ಇವೊತ್ತು ಸರ್ಕಾರ ಸದನವನ್ನು ತಪ್ಪು ದಾರಿಗೆ ಎಳೆಯುವುದಕ್ಕೆ ಪ್ರಯತ್ನಿಸುತ್ತಿದೆ.

ಅಧ್ಯಕ್ಷರು : ರೆಗ್ಯುಲರ್ ಆಕ್ಷನ್ ಪ್ಲಾನ್ ಎಂದು ನೀವು ಹೇಳಿದಿರಿ. ಈಗ ಕೆಲವು ಹೊಸ ಸಮಿತಿಗಳನ್ನು ಮಾಡುತ್ತೇವೆ. ಆ ಸಮಿತಿಯವರು depending upon the necessities in every constituency ಎಷ್ಟು ಹಣ ಬೇಕಾದರೂ ಕೇಳಲಿ ಕೊಡುತ್ತೇವೆಂದು ಹೇಳುತ್ತಿದ್ದೀರಿ, ಬರಗಾಲ ಪರಿಸ್ಥಿತಿ ಬಗ್ಗೆ ಎರಡು ಸಮಿತಿಗಳನ್ನು ರಚಿಸಿದ್ದು, ಅವು ಕಾರ್ಯನಿರತವಾಗಿದೆ. Two simultaneous activities are going on. One under the agency of the Deputy Commissioner.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ತಮ್ಮ ಮಾತಿನ ಪ್ರಕಾರ ಸಮಿತಿಗಳು ಎಷ್ಟು ಹಣ ಬೇಕೋ, ಅಷ್ಟು ಹಣವನ್ನು ಕೊಡುತ್ತಾರೆಂದು ತಾವು ಹೇಳುತ್ತಿದ್ದೀರಿ. ಅವರು ಹೇಳುತ್ತಿಲ್ಲ, ಖಂಡಿತವಾಗಿ ಹೇಳಿಲ್ಲ.

ಅಧ್ಯಕ್ಷರು : ಅವರು ಹೇಳಿದ ಹಾಗೆ ನಾನು ಹೇಳುತ್ತಿದ್ದೇನೆ.

ಶ್ರೀ ವಾಟಾಳ್‌ನಾಗರಾಜ್ ; ಯಾರಿಗೋಸ್ಕರ ನಾವು ಹಣ ಕೇಳುತ್ತಿದ್ದೇವೆ. ಸುಮ್ಮನೆ ನಾವೆಲ್ಲಾ ಸಮಿತಿಯಲ್ಲಿ ಸಭೆ ಸೇರಿಬಿಟ್ಟು....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಇದು ಶ್ರೀ ದೇಶಪಾಂಡೆಯವರಿಗೆ ಗೊತ್ತಿದೆ. ಶ್ರೀ ಪಿ.ಜಿ.ಆರ್. ಸಿಂಧ್ಯಾರವರಿಗೂ ಗೊತ್ತಿದೆ. ಆದರೆ, ಏಕೆ ಕನ್‌ಫ್ಯೂಶನ್ ಮಾಡುತ್ತಿದ್ದಾರೋ ಗೊತ್ತಿಲ್ಲ. ಸುಮ್ಮನೆ ಗೊಂದಲಕ್ಕೀಡುಮಾಡುತ್ತಿದ್ದಾರೆ. ನಾವು ನ್ಯಾಚುರಲ್ ಕ್ಯಲಾಮಿಟೀಸ್ ಫಂಡ್‌ನಲ್ಲಿ ಈಗಾಗಲೇ 27 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದು ಅಡಿಷನಲ್ ಫಂಡ್ ಅಲ್ಲ. ಅದರಲ್ಲಿ ಬ್ರೇಕ್-ಅಪ್ ಮಾಡಿ ಹಣವನ್ನು ಕುಡಿಯುವ ನೀರಿಗಾಗಿ, ಫಾಡರ್‌ಗಾಗಿ, ಎಂಪ್ಲಾಯ್‌ಮೆಂಟ್ ಜನರೇಶನ್‌ಗಾಗಿ, ಟ್ರಾನ್ಸ್‌ಪೋರ್ಟ್‌ಗಾಗಿ ಎಷ್ಟೆಷ್ಟು ಕೊಟ್ಟಿದ್ದೇವೆಂದು ಹೇಳಿದ್ದೇವೆ.

ಶ್ರೀ ಬಿ.ಎಚ್. ಬನ್ನಿಕೋಡ್ : ಕೊಟ್ಟಿಲ್ಲ.

ಅಧ್ಯಕ್ಷರು : ಅವೊತ್ತಿನ ನಡವಳಿಕೆ ಓದಿ ಗೊತ್ತಾಗುತ್ತದೆ. ಎಷ್ಟೆಷ್ಟು ಎಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೊನ್ನೆಯೇ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಅಡಿಷನಲ್ ಫಂಡ್‌ನಲ್ಲಿ ಇಟ್ಟಿದ್ದ ರೂ. 16 ಕೋಟಿಯಲ್ಲಿ ನ್ಯಾಚುರಲ್ ಕ್ಯಾಲಮಿಟೀಸ್‌ಗಾಗಿ ನಾಲ್ಕೂವರೆ ಕೋಟಿಯನ್ನು ಖರ್ಚುಮಾಡಿದ್ದೇವೆ. ಅಲ್ಲದೆ, ಮೂರೂವರೆ ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗಾಗಿ ಖರ್ಚು ಮಾಡಲಾಗಿದೆ. ಈಗ ಅಡಿಷನಲ್ ಫಂಡ್‌ನಲ್ಲಿ ಏನು ಕೊಟ್ಟಿದ್ದೀರಿ, ಎಂದು ತಾವು ಕೇಳುತ್ತಿದ್ದೀರಿ ಇದರಿಂದ ನನಗೆ ಆಶ್ಚರ್ಯವಾಗುತ್ತದೆ. ಆ ಹಣವನ್ನು ನಾರ್ಮಲ್ ಕೆಲಸಕ್ಕಾಗಿ ಕೊಡಬೇಕಾಗುತ್ತದೆ. ಅದರ ಜೊತೆಯಲ್ಲಿ ಮಾರ್ಚಿ ತಿಂಗಳ ಅಂತ್ಯದೊಳಗೆ ಎಲ್ಲೆಲ್ಲಿ ಹಣ ಉಪಯೋಗವಾಗಿಲ್ಲವೋ, ಅದನ್ನು ತೆಗೆದುಕೊಂಡು ಮತ್ತು ಇನ್‌ಸ್ಟೆಂಟ್ ಮನಿ ಎಂದು ಏನು ಇರುತ್ತದೆ. ಅದನ್ನು ಕೂಡ ತಕ್ಷಣ ತೆಗೆದುಕೊಂಡು ಸ್ಕೇರ್‌ಸಿಟಿಗಾಗಿ ಕೊಡುತ್ತೇವೆ. 3 ಕೋಟಿ 74 ಲಕ್ಷ ರೂಪಾಯಿಗಳನ್ನು ಮಾತ್ರ ನಾವು ಆದರಿಂದ ಡೈವರ್ಟ್ ಮಾಡಿಕೊಂಡಿದ್ದೇವೆ. ಡೈವರ್ಟ್ ಮಾಡಿಕೊಂಡ ಹಣವನ್ನು ಎಲ್ಲೆಲ್ಲಿ ನೆಸೆಸಿಟಿ ಇದೆಯೊ, ಅಲ್ಲಿಗೆ ಮಾತ್ರ ಬಿಡುಗಡೆ ಮಾಡತಕ್ಕಂಥ ದೃಷ್ಟಿಯಿಂದ ಕೊಟ್ಟಿದ್ದೇವೆ. ಇವೊತ್ತು ಸುಮಾರು 15-16 ಕೋಟಿ ರೂಪಾಯಿಗಳನ್ನು ಅಡಿಷನಲ್ ಫಂಡ್‌ನಲ್ಲಿ ಸ್ಕೇರ್‌ಸಿಟಿಗೋಸ್ಕರ ನಾವು

ಖರ್ಚು ಮಾಡಿದ್ದೇವೆ, ಮತ್ತೆ ಪುನಃ ಡ್ರಿಂಕಿಂಗ್ ವಾಟರ್ ಸ್ಕೇರ್‌ಸಿಟಿಗೆ ನಿಮಗೆ ಎಷ್ಟೆಷ್ಟು ಹಣ ಬೇಕೋ ಅಷ್ಟು ಹಣವನ್ನು ನ್ಯಾಚುರಲ್ ಕ್ಯಾಲಮಿಟೀಸ್ ಫಂಡ್‌ನಿಂದ ಸಹಾ ಬಿಡುಗಡೆ ಮಾಡುತ್ತೇವೆ. ರೆಗ್ಯುಲರ್ ಫಂಡ್‌ನಲ್ಲಿ ಕೆಲವು ಕೆಲಸ-ಕಾರ್ಯಗಳನ್ನು ತೆಗೆದುಕೊಳ್ಳಬೇಕಾಗಿರುವುದರಿಂದ, ಈ ಮಾತನ್ನು ವ್ಯಕ್ತಪಡಿಸಿದ್ದೇನೆ. ರೆಗ್ಯುಲರ್ ಫಂಡ್‌ನಲ್ಲಿ ಹಣ ಇದ್ದರೂ ಕೂಡ ಅದಕ್ಕೆ ರೇಟ್ ಎನ್ವಾನ್ಸ್ ಮಾಡಿಲ್ಲ. ಅದಕ್ಕಾಗಿ ಅದರ ಕೆಲಸವನ್ನು ಚೀಫ್ ಸೆಕ್ರೆಟರಿಯವರಿಗೆ ವಹಿಸಲು ನೀವು ರೇಟನ್ನು ಎನ್ವಾನ್ಸ್ ಮಾಡಿ ರೆಕ್ಟಿಡ್ಯೂಲ್ ಮಾಡಿದರೆ, ಅವರಿಗೆ ಆದೇಶ ಕೊಟ್ಟು ಇರತಕ್ಕಂಥ ಹಣವನ್ನು ಖರ್ಚು ಮಾಡಲಾಗುತ್ತದೆ. ಈ ಕೆಲಸವನ್ನು ತಕ್ಷಣ ತೆಗೆದುಕೊಳ್ಳಬೇಕೆಂದು ಅವರ ಬೇಡಿಕೆ ಇದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ನಾಳೆ ತಕ್ಷಣ ರಿವೈಸ್ ಮಾಡಿ, ರೇಟನ್ನು ತಕ್ಷಣ ನಿಗದಿ ಮಾಡುತ್ತೇವೆ. ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಮತ್ತು ತಮ್ಮ ಮುಖಾಂತರ ಕೂಡ ಸ್ಪಷ್ಟಪಡಿಸಿದ್ದಾರೆ. ಇದು ನನಗೂ ಕೂಡಾ ಗೊತ್ತಿದೆ. ಅದಕ್ಕೋಸ್ಕರ ದಯವಿಟ್ಟು ಆ ಕೆಲಸ ಮಾಡಿದರೆ, ಒಂದು ಕಡೆ ರೆಗ್ಯುಲರ್ ಫಂಡ್ ಕೂಡ ಬರುತ್ತದೆ. ಇನ್ನೊಂದು ಕಡೆ ಸ್ಕೇರ್‌ಸಿಟಿಗಾಗಿ ಹಣ ಬಿಡುಗಡೆ ಮಾಡಲು ಅನುಕೂಲವಾಗುತ್ತದೆ. ಎಷ್ಟು ಹಣ ಬಿಡುಗಡೆ ಮಾಡುತ್ತೀರೆಂದು ನೀವು ಕೇಳಿದ್ದೀರಿ. ಅಧ್ಯಕ್ಷರೇ, ಈಗಾಗಲೇ ಪ್ರತಿ ಜಿಲ್ಲೆಯ ಡೆಪ್ಯೂಟಿ ಕಮೀಷನರ್‌ಗಳು 18 ಕೋಟಿ ರೂಪಾಯಿಗಳನ್ನು ಎಪ್ರಿಲ್ ಅಂತ್ಯದವರೆಗೆ ಕೇಳಿದ್ದರು. ಆವರಿಗೆ ಈಗಾಗಲೇ ಸುಮಾರು 7 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಉಳಿದ ಹಣವನ್ನು ಕೂಡ ಹಂತಹಂತವಾಗಿ ಏಪ್ರಿಲ್ ಅಂತ್ಯದೊಳಗಾಗಿ ಎಲ್ಲೆಲ್ಲಿ ಅವಶ್ಯ ಇದೆಯೋ ಅಲ್ಲಿಗೆ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುತ್ತಿದ್ದೇವೆ.

(ಗ್ರಾಮೀಣಾಭಿವೃದ್ಧಿ ಸಚಿವರು ಸಭೆಯಿಂದ ಹೊರಟಾಗ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ, ಮಾನ್ಯ ಸದಸ್ಯರು ಸಹಕರಿಸಬೇಕು. ಅವರು 11.00 ಗಂಟೆಗೆ ಇನ್ನೊಂದು ಸದನದಲ್ಲಿ ಹಾಜರಾಗಬೇಕೆಂದು ನನಗೆ ಒಂದು ಚೀಟಿ ಬರೆದು ಕಳುಹಿಸಿದ್ದಾರೆ. ಅದಕ್ಕೆ ನಿಮ್ಮ ಎಲ್ಲರ ಪರವಾನಗಿ ಬೇಕೆಂದು ಕೇಳಿದ್ದಾರೆ. ನಾನು ಹೇಳಿದೆ, ಇದು ಬಹಳ ಪ್ರಾಮುಖ್ಯವಾದ ವಿಚಾರ, ಇಲ್ಲಿ ಪ್ರಸ್ತಾಪಿಸಲ್ಪಟ್ಟಿದೆ, ತಾವು ಇರಬೇಕೆಂದು ಹೇಳಿದೆ, ಅದಕ್ಕವರು, 11-55ಕ್ಕೆ ಅಲ್ಲಿಗೆ ಹೋಗಬೇಕೆಂದು ಇಲ್ಲಿಯವರೆವಿಗೂ ಕಾದಿದ್ದಾರೆ. ಆದುದರಿಂದ, ನಿಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆ. ಈಗ ಅವರು ಹೋಗುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಅವರು ಸ್ಕೇರ್‌ಸಿಟಿ ಎಂದು ಹೇಳಿದ್ದಾರೆ. ಆ ದೃಷ್ಟಿಯಿಂದ ಬೀದರ್, ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗದ ಕೆಲವು ಭಾಗಗಳು ಅದರಲ್ಲಿ ಬಂದಿಲ್ಲ, ಅಲ್ಲಿಯೂ ಕೂಡಾ ಕುಡಿಯುವ ನೀರಿನ ತೊಂದರೆ ಇದೆ. ಸ್ಕೇರ್‌ಸಿಟಿ ಇದ್ದರೆ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ. ಆ ರೀತಿ ಮೇಲೆ ಹೇಳಿರುವ ಜಿಲ್ಲೆಗಳಿಗೆ ಏನಾದರು ಹಣವನ್ನು ನಿಗದಿ ಮಾಡಿದ್ದೀರಾ? ಅಥವಾ ಅಲ್ಲಿ ಸ್ಕೇರ್‌ಸಿಟಿ ಇದ್ದರೆ ಇಮ್ಮೀಡಿಯೇಟ್ ಆಗಿ ಕ್ರಮ ತೆಗೆದುಕೊಂಡು ಹಣವನ್ನು ಬಿಡುಗಡೆ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಈಗಾಗಲೇ ಹೇಳಿದ್ದೇನೆ, ಜಿಲ್ಲಾಧಿಕಾರಿಗಳು ಕೇಳಿದ ಪ್ರಕಾರ ಅವಶ್ಯಕವಾಗಿರುವ ಕಡೆ ಹಣವನ್ನು ಬಿಡುಗಡೆ ಮಾಡಿದ್ದೇವೆ, ನಾವು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ಎಂದು ಕೇಳಿದರೆ... ತಮಗೆ ಗೊತ್ತಿದೆ ಅಧ್ಯಕ್ಷರೆ ಇವತ್ತು ಒಂದು ತಾಲ್ಲೂಕಿನ ಮೂರು ಹಳ್ಳಿಗಳಲ್ಲಿ

ಅಭಾವವಿದ್ದರೆ ಮುಂದೆ ನೂರೈವತ್ತು ಹಳ್ಳಿಗಳಿಗೆ ಅಭಾವವಾಗಬಹುದು. ಇನ್ನೊರು ಹಳ್ಳಿಗಳಿಗೆ ಆಗಬಹುದು. It all depends on the situation. Every month,it goes worst. Depending on the situation, we will release the amount.

ಈ ಕುಡಿಯುವ ನೀರಿನ ಸಮಸ್ಯೆಗೆ ಹಣ ತೊಂದರೆ ಬಾರದ ರೀತಿಯಲ್ಲಿ ನೋಡಿ ಕೊಳ್ಳುತ್ತೇವೆನ್ನತಕ್ಕ ಮಾತನ್ನು ಈಗಾಗಲೆ ಹೇಳಿದ್ದೇನೆ, ತಾವೂ ಕೂಡ ರೇಟ್ ರಿವೈಸ್ ಮಾಡಲು ಆದೇಶವನ್ನು ಕೊಟ್ಟಿದ್ದೀರಿ, before the adjournment of the House, he wil make a statement on that.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ ಇಂದಿನ ಅಂಜಂಡಾದಲ್ಲಿ ರಾಜ್ಯದಲ್ಲಿ ಕುಡಿಯುವ ನೀರಿನ ಪರಿಸ್ಥಿತಿಯ ಬಗ್ಗೆ ಸರ್ಕಾರ ತೆಗೆದುಕೊಂಡಿರತಕ್ಕ ಕ್ರಮದ ಬಗ್ಗೆ ಚರ್ಚೆ ಮಾಡಲು ಈ ಸದನದಲ್ಲಿ ಎಲ್ಲಾ ಸದಸ್ಯರ ಇಂಗಿತವನ್ನು ಅರಿತು ಅವಕಾಶವನ್ನು ಕೊಟ್ಟಿದ್ದೀರಿ, ನಿಮ್ಮ ಬಗ್ಗೆ ನಮಗೆ ಗೌರವವಿದೆ, ಆದರೆ ನೋವಿನ ವಿಚಾರವೆಂದರೆ ಈ ಸರ್ಕಾರ ಬರೀ ಘೋಷಣೆಗಳನ್ನು ಮಾಡುತ್ತಿದೆಯೇ ಹೊರತು ಹಣವನ್ನು ಬಿಡುಗಡೆ ಮಾಡುತ್ತಿಲ್ಲ, ಆದ್ದರಿಂದ ಸಾಧ್ಯವೂ ಇಲ್ಲ, ಕೇವಲ ಬಿಡುಗಡೆ ಮಾಡುತ್ತೇವೆ ಎನ್ನತಕ್ಕಂತಹ ಮಾತನ್ನೇ ಪುನಃ ಹೇಳುತ್ತಿದ್ದಾರೆ. ಎಲ್ಲಿಯೂ ಕೂಡ ಬರಗಾಲ ಪರಿಸ್ಥಿತಿಯನ್ನು ಘೋಷಣೆ ಮಾಡಿಲ್ಲ, ಅದು ಕಾರವಾರವಿರಬಹುದು. ಬೀದರ್, ಶಿವಮೊಗ್ಗ ಅಥವಾ ದಕ್ಷಿಣ ಕನ್ನಡ ಜಿಲ್ಲೆಗಳಿರಬಹುದು. ಕುಡಿಯುವ ನೀರನ್ನು ಒದಗಿಸಲು ಕ್ರಮತೆಗೆದುಕೊಳ್ಳುವಲ್ಲಿ ಸಂಪೂರ್ಣವಾಗಿ ವಿಫಲವಾಗಿದ್ದಾರೆ, With all respect to you, because you have allowed discussion for such a long time, we protest against the Government's attitude.

ಅವರ ಹತ್ತಿರ ಹಣವಿಲ್ಲ. ಖಾಜನೆ ಬರಿದಾಗಿದೆ, ಸಾಮಾನ್ಯರನ್ನು ತಪ್ಪುದಾರಿಗೆಳೆಯುವ ಘೋಷಣೆಗಳನ್ನು ನಾವು ಪ್ರತಿಭಟಿಸುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಇಷ್ಟೊಂದು ಕಳಕಳಿಯಿಂದ ಕೇಳಿಕೊಂಡರು.

MR. SPEAKER : I have to come to this painful conclusion that now it is being politicised, Tilll now it was a humanitarian question. Now it is being politicised.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದೇ 16ನೇ ತಾರೀಖು ನಾಲ್ಕೂವರೆ ಕೋಟಿ ರೂಪಾಯಿಗಳನ್ನು ಅಡೀಪ್‌ನಲ್ ಆಗಿ ಬಿಡುಗಡೆ ಮಾಡಿದ್ದೇವೆ, ಅದೂ ಕೂಡ ಅವರಿಗೆ ಗೊತ್ತಿಲ್ಲ.

(ಗೊಂದಲ)

MR. SPEAKER : I have called the Minister.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ನಾವು ಸಭೆಯನ್ನು ತ್ಯಾಗ ಮಾಡುತ್ತಿಲ್ಲ.

ಶ್ರೀ ಟಿ.ಎಂ. ಮಂಜುನಾಥ್ : ಸರ್ಕಾರ ಹಣ ಕೊಟ್ಟರೂ ಸಹ ಟೀಕೆ ಮಾಡಿ ಹೊರಗಡೆ ಹೋಗುತ್ತಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ ತಾವು ಗ್ರಾಮೀಣ ಜನತೆಯನ್ನು ಅರ್ಥಮಾಡಿಕೊಂಡು ಕುಡಿಯುವ ನೀರಿನ ಸಮಸ್ಯೆ ಅರ್ಥಮಾಡಿಕೊಂಡು ಸುಧೀರ್ಘವಾದ

ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಒಂದು ಕ್ಷಣ ಮಂತ್ರಿಗಳು ಎದ್ದು ನಿಂತುಕೊಂಡು ವ್ಯತ್ಯಾಸ ಏನು ಇದೆ ಬೋರ್‌ವೆಲ್‌ಗಳಿಗೆ ಜಿಲ್ಲಾಧಿಕಾರಿಗೆ ಕೊಡುವಂಥ ರೇಟಿಗೂ ಜಿಲ್ಲಾಪರಿಷತ್ತಿಗೆ ಕೊಡುವಂಥ ರೇಟ್‌ಗೂ ವ್ಯತ್ಯಾಸ ಇದೆ ಎನ್ನುವುದು ಮನವರಿಕೆಯಾಗಿದೆ, ನಾನು ಆದನ್ನು ಸರಿ ಮಾಡಿಕೊಡುತ್ತೇನೆ. ಎನ್ನುವ ಭರವಸೆಯನ್ನು ಕೊಟ್ಟು, ಇಷ್ಟು ಹಣ ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದರೆ ಈ ಸಂದರ್ಭ ಬರುತ್ತಿರಲಿಲ್ಲ. ವಿನಾಕಾರಣ ಆಡಳಿತದಲ್ಲಿ ಈ ವ್ಯತ್ಯಾಸ ಬಂದಾಗ ಯಾವುದೇ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದು ಬೇಡವೆ, ಗ್ರಾಮಾಣ ಜನತೆಯ ಪ್ರಶ್ನೆ ಬಂದಾಗ ಈ ಚರ್ಚೆಗೆ ಇಷ್ಟು ಆಗತ್ಯತೆ ಮಾಡುವಂಥಾದ್ದು ಒಂದು ಜವಾಬ್ದಾರಿಯುತವಾದ ಸರ್ಕಾರದ ಕರ್ತವ್ಯ ನಾವು ಪ್ರಸ್ತಾಪ ಮಾಡುವುದಕ್ಕೆ ಮುಂಚೆಯೇ ಅಲ್ಲಿ ವಾಸ್ತವಾದ ಸ್ಥಿತಿಗತಿ ಏನು ಎನ್ನುವುದನ್ನು ತಿಳಿದುಕೊಳ್ಳ ಬೇಕಾಗಿತ್ತು. ಜನತೆಯ ಬಗ್ಗೆ ಕಳಕಳಿ ಇಲ್ಲ ಬಡವರ ಬಗ್ಗೆ ಕಳಕಳಿ ಇಲ್ಲ, ಗ್ರಾಮೀಣ ಜನರ ಪರಿಸ್ಥಿತಿಯನ್ನು ತಿಳಿದುಕೊಳ್ಳುವಂಥ ಒಂದು ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತಿಲ್ಲ. ಈ ಪರಿಸ್ಥಿತಿಯನ್ನು ಗಮನಿಸಿ, ಸ್ಪಷ್ಟವಾದ ಘೋಷಣೆ ಮಾಡಿ. ಆದರೆ ನಾವು ನಿಮ್ಮಲ್ಲಿ ಕೇಳುವಂಥಾದ್ದು ನಿಮಗೆ ಈ ಸಮಸ್ಯೆ ಗೊತ್ತಾದ ಮೇಲೆ ಈಗಾಗಲೇ ಬರಗಾಲ ಪರಿಸ್ಥಿತಿ ಪ್ರಾರಂಭವಾಗಿ ಎರಡು ತಿಂಗಳು ಆಗಿರಬೇಕಾದರೆ ಹಣ ಬಿಡುಗಡೆ ಮಾಡುವುದು ನಿಮ್ಮ ಕರ್ತವ್ಯ ಅಲ್ಲವೇ? ಅದನ್ನು ಮಾಡದೇ ಈ ರೀತಿ ಮಾಡಿದರೆ ಹೇಗೆ?

(ಗೊಂದಲ)

(ಉಪಾಧ್ಯಕ್ಷಿಣಿಯವರು ಅಧ್ಯಕ್ಷರ (ಪೀಠವನ್ನು ಅಲಂಕಿಸಿದರು)

ಶ್ರೀ ವಾಟಾಳ್ ನಾಗರಾಜ್ : ಸರ್ಕಾರ ಸಾಯಂಕಾಲದೊಳಗೆ ಈ ಸದನ ಏಳುವುದಕ್ಕೆ ಮುಂಚೆ ಏನು ಚರ್ಚೆ ನಡೆಯಿತು ಅದಕ್ಕೆ ಒಂದು ಉತ್ತರ ಕೊಡಬೇಕು. ನಾವು ಈಗ ಸಭಾತ್ಯಾಗ ಮಾಡಬೇಕು ಎನ್ನುವ ಉದ್ದೇಶವಿಲ್ಲ.

(ಗೊಂದಲ)

ಉಪಾಧ್ಯಕ್ಷಿಣಿಯವರು : ಒಬ್ಬೊಬ್ಬರು ಮಾತನಾಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸನ್ಮಾನ್ಯ ಅಧ್ಯಕ್ಷಿಣಿಯವರೇ ಶಿವರಾಮೇಗೌಡರು ಬೆಳಿಗ್ಗೆಯಿಂದಲೂ ಈ ಸದನದಲ್ಲಿ ಇರಲಿಲ್ಲ. ನಾವು ಒಂಭತ್ತು ಗಂಟೆಗೆ ಸರಿಯಾಗಿ ಸಭೆಗೆ ಬಂದಿದ್ದೇವೆ.

(ಗೊಂದಲ)

ಉಪಾಧ್ಯಕ್ಷಿಣಿಯವರು : ಇಬ್ಬರು ಇಬ್ಬರು ಮಾತನಾಡಿದರೆ ಹೇಗೆ.

ಶ್ರೀ ಕೆ.ಎಸ್. ಈಶ್ವರಪ್ಪ : ನೀರಿನ ಸಮಸ್ಯೆ ಬಗ್ಗೆ ಚರ್ಚೆ ಮಾಡುವಾಗ ಇವರು ಇರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷಿಣಿಯವರೆ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಸದನ ಮುಗಿಯುವುದರೊಳಗೆ ಇದರ ಬಗ್ಗೆ ಸರ್ಕಾರ ಕಳಕಳಿಯಿಂದ ಒಂದು ನಿರ್ಣಯ ಕೈಗೊಂಡು ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕು. ಸರ್ಕಾರದ ಒಂದು ಆಶ್ವಾಸನೆ ಪ್ರಕಾರ ನಾವು ಇಲ್ಲಿ ಕುಳಿತಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾವುದಕ್ಕೂ ನಿಮ್ಮ ಹತ್ತಿರ ದುಡ್ಡು ಇಲ್ಲ ಎಂದು ನಮಗೆ ಗೊತ್ತಿದೆ. ಸಂಪನ್ಮೂಲವನ್ನು ಕ್ರೋಢೀಕರಿಸಿಕೊಂಡು ಜನಹಿತಕಾರ್ಯ ಮಾಡದೇ ಇವರು ಸಂಪೂರ್ಣವಾಗಿ ವಿಫಲವಾಗಿರುವುದು ತಮಗೆ ಗೊತ್ತಿದೆ. ಸನ್ಮಾನ್ಯ ಅಧ್ಯಕ್ಷರೇ ತಮ್ಮ ಮೂಲಕ ಈ ಸದನ ಮುಗಿಯುವುದರೊಳಗೆ ಇಷ್ಟು ಹಣ

ಬಿಡುಗಡೆ ಮಾಡಿ ಬೋರ್‌ವೆಲ್ ತೆಗೆಯುವುದಕ್ಕೆ ಸಿದ್ದರಿದ್ದೇವೆ ಎಂಬುದನ್ನು ಸ್ಪಷ್ಟಪಡಿಸಬೇಕು. ಎಂದು ವಿನಂತಿಮಾಡುತ್ತೇವೆ.

ಉಪಾಧ್ಯಕ್ಷಿಣಿಯವರು : ಆಯಿತು ಆಯಿತು, ಮಾನ್ಯ ಮಂತ್ರಿಗಳು ನಿಂತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷಿಣಿಯವರೇ ಇದನ್ನು ನಾನು ಒಪ್ಪುತ್ತೇನೆ. ತಮಗೆ ಗೊತ್ತಿದೆ. ನೀರಿನ ಪ್ರಶ್ನೆ ಅದು ಸಾರ್ವತ್ರಿಕವಾದಂಥ ಪ್ರಶ್ನೆ. ನಮ್ಮ ಸನ್ಮಾನ್ಯ ಯಡಿಯೂರಪ್ಪನವರು, ಬೈರೇಗೌಡರವರು ಮತ್ತು ವಾಟಾಳ್ ನಾಗರಾಜ್ ಅವರು ಹೇಳಿದ ವಿಷಯ ಅನೇಕ ಸಾರಿ ಈ ಸದನದಲ್ಲಿ ಎತ್ತಿರತಕ್ಕಂಥ ಪ್ರಶ್ನೆ. ಸನ್ಮಾನ್ಯ ಸಚಿವರು ಕೂಡ ಉತ್ತರ ಕೊಟ್ಟಿದ್ದಾರೆ, ಈ ನೀರಿನ ಬಗ್ಗೆ ಚರ್ಚೆ ಮಾಡುವುದಕ್ಕೆ ಸಾಕಷ್ಟು ಅವಕಾಶ ಕೊಟ್ಟಿದ್ದೀರಿ, ನಾವು ಕೂಡ ಬಹಳ ತಾಳ್ಮೆಯಿಂದ ಕೇಳುತ್ತಿದ್ದೇವೆ. ತಾಳ್ಮೆಗೆಟ್ಟಿಲ್ಲ ಏಕೆಂದರೆ ಇದು ಜೀರೋ ಅವರ್, ಜೀರೋ ಅವರ್ ಪರ್ಮಿಟ್ ಆಗುವುದಿಲ್ಲ. ಆದರೂ ಕೂಡ ನಾನು ತಾಳ್ಮೆಯಿಂದ ಸಾಕಷ್ಟು ಗೊತ್ತು ಮಾನ್ಯ ಸದಸ್ಯರು ಮಾತನ್ನು ಬಹಳ ಸಾವಧಾನದಿಂದ ಲಾಲಿಸಿದ್ದೇವೆ. ಸನ್ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಸನ್ಮಾನ್ಯ ಗ್ರಾಮೀಣ ಸಚಿವರು ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ತಾವು ಅವರನ್ನು ಮೈ ಮೇಲೆ ಹಾಕಿಕೊಳ್ಳುವ ಹಾಗೆ ಕಾಣುತ್ತಿದೆ. ನಿಮ್ಮ ಧ್ವನಿ, ಶೃತಿ ನೋಡಿದರೆ ಅವರನ್ನು ಮೈಮೇಲೆ ಹಾಕಿಕೊಳ್ಳುವ ಹಾಗೆ ಕಾಣುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮೈಮೇಲೆ ಹಾಕಿಕೊಳ್ಳುವ ಪ್ರಶ್ನೆಯೇ ಇಲ್ಲ. ನಿಮ್ಮನ್ನು ಕಾಂಪ್ಲಿಮೆಂಟ್ ಮಾಡೋಣ ಎಂದು ನಾನು ಎದ್ದು ನಿಂತಿದ್ದೇನೆ. ಏಕೆಂದರೆ ಯಾರೂ ಇದರ ಬಗ್ಗೆ ರಾಜಕೀಯ ಮಾಡುತ್ತಿಲ್ಲ. ರಾಜಕೀಯಕ್ಕೆ ಬೇರೆ ಗ್ರಾಸ್ ಇಲ್ಲ. ಕಾರಣಗಳು ಇಲ್ಲ. ಪಾಪ ನೆರೆ ಹಾವಳಿ ಬಂದಾಗ ಒಂದು ಹುಲ್ಲುಕಡ್ಡಿಯೂ ಸಹ ಆಸರೆಯಾಗುತ್ತದೆ ಅಂಥ ಪರಿಸ್ಥಿತಿ ಅವರಿಗೆ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ ಇಷ್ಟು ದಿವಸ ಎಲ್ಲಾ ವಿಚಾರದಲ್ಲಿಯೂ ನಿಮ್ಮೊಂದಿಗೆ ಹೊಂದಿಕೊಂಡಿದ್ದಾರೆ. ಏಕೆಂದರೆ ನಾಳೆ ಚುನಾವಣೆಗೆ ಹೋಗಬೇಕು ಅವರು ಅನಿವಾರ್ಯವಾಗಿ ವಾಕ್ ಔಟ್ ಮಾಡಿದ್ದಾರೆ, ಅವರು ಇಲ್ಲದೆ ಇದ್ದಾಗ ಮಾತನಾಡುವುದನ್ನು ನಾವು ಒಪ್ಪುವುದಕ್ಕೆ ಸಿದ್ಧವಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಮುಳುಗುವವನಿಗೆ ಕೆಲವು ಸಾರಿ ಹುಲ್ಲು ಕಡ್ಡಿ ಸಿಕ್ಕಿದರೆ ಸಾಕಂತೆ , ಆ ತರಹ ಪರಿಸ್ಥಿತಿ ಪಾಪ ಅವರದು.

ಶ್ರೀ ವಾಟಾಳ್ ನಾಗರಾಜ್ : ಅವರು ಸಭೆಗೆ ಬರಲಿ ಮಾತನಾಡೋಣ.

ಶ್ರೀ ಎಂ. ವೀರಪ್ಪ ಮೊಯಿಲಿ : ಅಧ್ಯಕ್ಷರೆ, ಎರಡು ಬೇರೆ ಬೇರೆ ಹೇಳಿಕೆಗಳನ್ನು ಇಲ್ಲಿ ಕೊಟ್ಟಿದ್ದೇವೆ. ಆ ಎರಡು ಬೇರೆ ಬೇರೆ ಹೇಳಿಕೆಗಳನ್ನು ಕೊಟ್ಟಿದ್ದು ಮಾತ್ರವಲ್ಲ ಇದಕ್ಕೆ ಕ್ಷಿಪ್ರವಾದ ಆನ್ ದಿ ಸ್ಪಾಟ್, ಯಾರಿಗೆ ನಾವು ತಾಲ್ಲೂಕುಮಟ್ಟದಲ್ಲಿ ನಮ್ಮ ಎಂ.ಎಲ್.ಎ.ಗಳ ಅಧ್ಯಕ್ಷತೆಯಲ್ಲಿ ಸಭೆ ಮಾಡಿ ಅವರು, ನೀರು ಪೂರೈಕೆ ಬಗ್ಗೆ ಎಷ್ಟು ಹಣದ ಬೇಡಿಕೆ ಮಾಡುತ್ತಾರೆ ಅದನ್ನು ಪೂರೈಸತಕ್ಕಂಥದ್ದಕ್ಕೆ ಸರ್ಕಾರಿ ಸಂಪೂರ್ಣವಾದಂಥ ಜವಾಬ್ದಾರಿಯನ್ನು ಹೊರುತ್ತದೆ. ಎಂದು ಹೇಳಿದ್ದೇವೆ. ನಾವು ಏನು ಮಾಡಿದ್ದೇವೆ, ಏನು ಮಾಡುತ್ತೇವೆ ಎಂದು ಸ್ಪಷ್ಟೀಕರಣ ಮಾಡಿದ್ದೇವೆ. ಅದಕ್ಕೆ ಟಾಸ್ಕ ಫೋರ್ಸ್ ಎಂದು ಹೇಳಿದ್ದೇವೆ. ಇವೊತ್ತು ಪ್ರಶ್ನೆ ಸೀಮಿತವಾಗಿಲ್ಲ. ಒಂದು ವೇಳೆ ನಾವು ಮಾತು ಕೊಟ್ಟಿದ್ದೇವೆ, ಈಗ ಬಿಡುಗಡೆ ಮಾಡುತ್ತೇವೆ. ಇಲ್ಲಿ 10 ಕೋಟಿ ರೂಪಾಯಿ ಪ್ರಶ್ನೆ ಅಲ್ಲ. ಅದಕ್ಕೆ 30 ಕೋಟಿ ರೂಪಾಯಿ ಬೇಕಾದರೂ ಕೂಡ ಅವಶ್ಯಕತೆ ಇದ್ದರೆ ಬಿಡುಗಡೆ ಮಾಡಲಿಕ್ಕೆ ಸರ್ಕಾರ ಸಿದ್ಧ ಇದೆ. This is

the assurance which we are going to give on behalf of the government.

ತಾವು ಎಲ್ಲಿಯಾದರೂ ಅಲ್ಲಿ ಅನುಷ್ಟಾನ ಮಾಡಿ, ತಮಗೆ ತೊಂದರೆ ಇದ್ದರೆ, ತಾವು ಬಾಸ್ ಇದ್ದ ಹಾಗೆ, ತಮಗೆ ಸಾವರಿನ್ ಪವರ್ ಇದೆ. ಅಲ್ಲಿ ಏನಾದರೂ ವ್ಯತ್ಯಾಸ ಇದ್ದರೆ, ಅನುಷ್ಟಾನದ ಬಗ್ಗೆ. ಅದನ್ನು ಕೂಡ ಪರಿಹಾರ ಮಾಡಬೇಕಾದಂಥ ಒಂದು ಸಂಪೂರ್ಣವಾದಂಥ ಅಧಿಕಾರ ನಾವು ಶಾಸಕರ ಟಾಸ್ಕ ಫೋರ್ಸ್‌ಗೆ ಅಲ್ಲಿ ಕೊಟ್ಟಿದ್ದೇವೆ. ಈ ಪರಿಸ್ಥಿತಿ ಇಲ್ಲಿ ಬರಬಾರದು ಎಂದು ಹೇಳಿ ಮಾಡಿದ್ದೇವೆ. ಮತ್ತೆ ರೇಟಿನ ಬಗ್ಗೆ ಕೂಡ ಈಗಾಗಲೇ ಇದಕ್ಕೆ ನಿರ್ಣಯ ಮಾಡಿದ್ದೇನೆ. ಜಿಲ್ಲಾಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರಿಗೆ ಅಧಿಕಾರ ಕೊಟ್ಟಿದ್ದೇವೆ, ಇದರಲ್ಲಿ ಇಲ್ಲಿ ನಮ್ಮನ್ನು ಕೇಂದ್ರೀಕೃತವಾಗಿ ಉಳಿಸಿಕೊಂಡಿಲ್ಲ. ಅದರ ಬಗ್ಗೆ ಏನು ಮಾಡಿದ್ದೇವೆಂದು ಹೇಳಿಕೆ ಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇವೊತ್ತು ಸದನ ಮುಗಿಯುವುದರೊಳಗೆ ಸರ್ಕಾರ ಏನು ಮಾಡಿದೆ, ಇನ್ನು ಮುಂದೆ ಕೂಡ ಏನು ಮಾಡುತ್ತೇವೆ ಎಂದು ನಾವು ಹೇಳಿಕೆ ಕೊಡಲಿಕ್ಕೆ ಇದ್ದೇವೆ. ತಾವು ಏನು ಸಜೆಷನ್ ಕೊಟ್ಟಿದ್ದೀರಿ, ಅದನ್ನು ಕೂಡ ಗ್ರಹಿಸಿ ಅದಕ್ಕೆ ಪೂರಕವಾದಂಥ ಹೇಳಿಕೆಯನ್ನು ಕೊಡುತ್ತೇವೆ.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ : ಅಧ್ಯಕ್ಷರೇ, ಈಗ ಮಾನ್ಯ ಸದಸ್ಯರ ಸಲಹೆಯನ್ನು ನಾವು ಕೇಳಿದ್ದೇನೆ. ಅವೆಲ್ಲಾ ಸಲಹೆಗಳಿಗೂ ಉತ್ತರವನ್ನು ನಾವು ಕೊಟ್ಟಿದ್ದೇವೆ. ರೇಟು ಬದಲಾವಣೆ ಮಾಡುವುದರ ಬಗ್ಗೆಯೂ ಸಹ ಉತ್ತರವನ್ನು ಕೊಟ್ಟಿದ್ದೇನೆ. ಆಮೇಲೆ ಸಮಿತಿಗಳು ಮಾಡುವ ವಿಚಾರದಲ್ಲಿ ಕೂಡ ಕೊಟ್ಟಿದ್ದೇವೆ. ಪ್ರತಿ ತಾಲ್ಲೂಕಿನಲ್ಲಿ ಎಲ್ಲೆಲ್ಲಿ ಅವಶ್ಯಕತೆ ಇದೆ ಎನ್ನತಕ್ಕ ಬಗ್ಗೆ ತಾವೇ ಪರಿಶೀಲನೆ ಮಾಡಿ, ತಾವೇ ಸಲಹೆ ಮಾಡಿ, ನೀವು ಸಲಹೆ ಕೊಟ್ಟಿದ್ದನ್ನು ನಾವು ಕೆಲಸ ತೆಗೆದುಕೊಳ್ಳುತ್ತೇವೆ. ಅದಕ್ಕೆ ಹಣದ ಕೊರತೆ ಇಲ್ಲ ಎಂದು ಹೇಳಿದ್ದೇವೆ. ಮಾನ್ಯ ಸದಸ್ಯರಿಗೆ ಯಾವ ಆತಂಕ ಇದೆ ಎಂದು ಗೊತ್ತಿಲ್ಲ. ನಾನು ಯಾವ ಭಾಷೆಯಲ್ಲಿ ಹೇಳಬೇಕು. ನಾನು ನೇರವಾಗಿ ಹೇಳಿದರೆ ನಿಮಗೆ ಅರ್ಥವಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಇಲ್ಲಿ ಕುಳಿತು ನಿಮಗೆ ಸಹಕಾರ ಕೊಟ್ಟರೆ, ಈ ಮಾತನ್ನು ಹೇಳಿದರೆ ಹೇಗೆ. ಇವೊತ್ತು ಜಿಲ್ಲಾಧಿಕಾರಿಗೆ ಕೊಟ್ಟಂಥ ಅಧಿಕಾರ ಏನಿದೆ, ಹೈರೇಟು ಕೊಟ್ಟು, ಅದೇ ರೇಟನ್ನು ಅವರಿಗೆ ಕೊಡುವಂಥ ವ್ಯವಸ್ಥೆ ಮಾಡಿ ಎಂದು ಹೇಳಿದೆವು. ಜಿಲ್ಲಾಪರಿಷತ್‌ನಲ್ಲಿ ದುಡ್ಡು ಇಲ್ಲ, ಬಿಡುಗಡೆ ಮಾಡುತ್ತೇವೆಂದು ಹೇಳಿ.

(ಗೊಂದಲ)

ಉಪಾಧ್ಯಕ್ಷರು : ಈಗ ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದಾರೆ ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಬಿ. ಬಸವಲಿಂಗಪ್ಪ : ಈಗ ಹಂಗಾಮಿಯಾಗಿ ಏನು ಪರಿಸ್ಥಿತಿ ಬಂದಿದೆ ಅದಕ್ಕನುಗುಣವಾಗಿ, ಆ ರೇಟಿನ ಬಗ್ಗೆ ಹೇಳಿದೆ, ಆ ಹೆಚ್ಚಿರತಕ್ಕಂಥದ್ದರ ಬಗ್ಗೆ ನಾನು ಮುಂಚೆ ಹೇಳಿದ್ದೇನೆ. ಹಿಂದೆ ಅದನ್ನು ಕಡಿಮೆ ಮಾಡಿದ್ದವು. ಈಗ ಬೇರೆ ಬದಲಾವಣೆ ಮಾಡುತ್ತೇನೆಂದು ಹೇಳುತ್ತಿದ್ದೇನೆ. ಇದಕ್ಕೆ ಹೊರತಾಗಿ ಏನು ಹೇಳಬೇಕು. ನನಗೆ ಅರ್ಥವಾಗಿಲ್ಲ. ದಯಮಾಡಿ. ತಾವು ಸಂತುಷ್ಟರಾಗಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಸದನದಲ್ಲಿ ಸ್ಟೇಮ್‌ಮೆಂಟ್ ಮಾಡಲಿಕ್ಕೆ ಒಪ್ಪಿಕೊಂಡಿದ್ದೀರಿ.

ನಮಗೆ ಹಣ ಬಿಡುಗಡೆ ಮಾಡುತ್ತೇವೆಂದು ಆಶ್ವಾಸನೆ ಕೊಡಬೇಕು. ಇಲ್ಲ ಅಂದರೆ ನಾವು ಪ್ರತಿಭಟನೆ ಮಾಡುತ್ತೇವೆ. ತಾವು ಸ್ಟೇಟ್‌ಮೆಂಟ್ ಮಾಡುವ ಭರವಸೆಯನ್ನು ಕೊಡಬೇಕು.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಈಗಾಗಲೇ ಹೇಳಿದ್ದಾರೆ ದಯಮಾಡಿ ತಾವು ಕುಳಿತುಕೊಳ್ಳಬೇಕು. ಈಗ ಒಂದು ಪ್ರಕಟಣೆ.

ಪ್ರಕಟಣೆ.

ಉಪಾಧ್ಯಕ್ಷರು : ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 114ರ ಮೇರೆಗೆ ಈ ಕೆಳಕಂಡ ವಿಧೇಯಕಗಳಿಗೆ ಕರ್ನಾಟಕ ವಿಧಾನ ಪರಿಷತ್ತು ತನ್ನ ಅನುಮೋದನೆಯನ್ನು ನೀಡಿದೆ ಎಂದು ತಿಳಿಸಿರುತ್ತಾರೆ.

1. ಕರ್ನಾಟಕ ಧನ ವಿನಿಯೋಗ ವಿಧೇಯಕ, 1991.
2. ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 1991.
3. ಕರ್ನಾಟಕ ವಿಧಾನ ಮಂಡಲ (ಅನರ್ಹತಾ ನಿವಾಹಣೆ) (ತಿದ್ದುಪಡಿ) ವಿಧೇಯಕ, 1991.
4. ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕ, 1991.
5. ಕರ್ನಾಟಕ ಸ್ಥಳೀಯ ಪ್ರದೇಶಗಳೊಳಗೆ ಅಲ್ಲಿಗೆ ಬಳಕೆ ಉಪಯೋಗ ಅಥವಾ ಮಾರಾಟಕ್ಕಾಗಿ ಬರುವ ಸರಕುಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, 1991.
6. ಕರ್ನಾಟಕ ಕೃಷಿ ಆಧಾಯ ತೆರಿಗೆ (ತಿದ್ದುಪಡಿ) ವಿಧೇಯಕ, 1991.
7. ಕರ್ನಾಟಕ ವೃತ್ತಿಗಳ, ಕಸಬುಗಳ ಅಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, 1991.
8. ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ, 1991.
9. ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 1991.
10. ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕ, 1991.

ನಿಯಮ 334ರ ಮೇರೆಗೆ

ಸೋಮವಾರಪೇಟೆ ತಾಲ್ಲೂಕಿನ ಹೆಬ್ಬಾಲೆ ಗ್ರಾಮದ ಹತ್ತಿರ ಸೇತುವೆ ನಿರ್ಮಾಣ ಮಾಡುವುದು.

ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ) : ಮಾನ್ಯ ಉಪಾಧ್ಯಕ್ಷಿಣಿಯವರೆ, ಕಾವೇರಿ ಹೊಳೆಗೆ ಅಡ್ಡಲಾಗಿ ಕೊಡುವ ಜಿಲ್ಲೆ ಸೋಮವಾರ ಪೇಟೆ ತಾಲೂಕು ಹೆಬ್ಬಾಲೆ ಗ್ರಾಮದಿಂದ ಮೈಸೂರು ಜಿಲ್ಲೆ ಪಿರಿಯಾಪಟ್ಟಣ ತಾಲೂಕು ಬೆಟ್ಟದ ಪುರ ಹೋಬಳಿಗೆ ಹೋಗಲು ಸೂಳಿಕೋಟೆ ಸೇತುವೆಯನ್ನು ನಿರ್ಮಾಣ ಮಾಡಲು ಸರ್ಕಾರ ಈಗಾಗಲೇ ಅಂದಾಜು 30 ಲಕ್ಷ ರೂ. ಖರ್ಚು ಮಾಡಿದ್ದರೂ ಸದರಿ ಸೇತುವೆಯ ಕೆಲಸ 2 ವರ್ಷಗಳಿಂದ ಸ್ಥಗಿತವಾಗಿ ನಿಂತಿದೆ. ಈ ಸೇತುವೆಯು ಆ ಭಾಗದ ಜನಗಳಿಗೆ ಬಹಳ ಅವಶ್ಯಕವಾಗಿರುವುದರಿಂದ ಸನ್ಮಾನ್ಯ ಮುಖ್ಯ ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ಕೊಟ್ಟು ಈ ಸೇತುವೆಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.